೩೬೩

ಬತ್ತಲೇಶ್ವರ ರಾಮಾಯಣ

ಡಾ. ಎಲ್. ಆರ್. ಹೆಗಡೆ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಏಪ್ರಿಲ್, ೧೯೮೬

ಉಪನ್ಯಾಸ ಗ್ರಂಥಮಾಲೆ

೩೬೩

ಬತ್ತಲೇಶ್ವರ ರಾಮಾಯಣ

ಡಾ. ಎಲ್. ಆರ್. ಹೆಗಡೆ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಪ್ರಿಲ್, ೧೯೮೬

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಎಪ್ರಿಲ್, ೧೯೬೮

ಬೆಲೆ : ೫೦ ಪೈಸೆ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ ಪ್ರೆಸ್

ತಡಕೋಡ ಗಲ್ಲಿ

ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ. ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯುವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ,

ಈ ಮಾಲೆಯಲ್ಲಿ ಈಗಾಗಲೇ ೩೬೨ ಪುಸ್ತಿಕೆಗಳು ಪ್ರಕಟ ವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿ ರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋ ಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಜಿ. ದೇಸಾಯಿ
ಕುಲಪತಿ

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗದ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ ಉತ್ತರ ಕನ್ನಡ ಜಿಲ್ಲೆಯ ಆಚವೆ ಅಂಗಡಿಬೈಲ ಗ್ರಾಮದಲ್ಲಿ ೧೯೮೩ ಫೆಬ್ರುವರಿ ೨೬ನೆಯ ದಿನಾಂಕದಂದು "ಬತ್ತಲೇಶ್ವರ ರಾಮಾಯಣ"ಎಂಬ ವಿಷಯದ ಮೇಲೆ ಮಾಡಿದ ಉಪನ್ಯಾಸವು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿದೆ.

ಇದರಲ್ಲಿ ವರಕವಿ ಬತ್ತಲೇಶ್ವರನ ಗ್ರಂಥದ ಹಿರಿಮೆಯನ್ನು ಕರಿಯನ್ನು ಕನ್ನಡಿಯಲ್ಲಿ ಹಿಡಿದ ಹಾಗೆ ಈ ಚಿಕ್ಕ ಹೊತ್ತಿಗೆಯಲ್ಲಿ ಕಾಣಿಸಲಾಗಿದೆ.

ಈ ಉಪನ್ಯಾಸವನ್ನು ಬರೆವಲ್ಲಿ ಸಹಾಯಕವಾಗಿ ಹಸ್ತಪ್ರತಿಯ ರೂಪದಲ್ಲಿರುವ "ಗೋಕರ್ಣಪುರಾಣ"ವನ್ನು ಕೊಟ್ಟ ಹೆಗಡೆ ಊರಿನ ಶ್ರೀ ಎನ್. ಕೆ. ಹೆಗಡೆ, ಮಾಧ್ಯಮಿಕ ಶಾಲಾ (ಈಗ ಕತ್ತಗಾಲಿನಲ್ಲಿ) ಮುಖ್ಯಾಧ್ಯಾಪಕರಿಗೂ, ಸಂಸ್ಕೃತ ಅಧ್ಯಾತ್ಮರಾಮಾಯಣವನ್ನು ನೀಡಿದ ಶ್ರೀ ಗಣಪತಿ ಕುಪ್ಪಯ್ಯ ಹೆಗಡೆಯವರಿಗೂ, ಸಂಸ್ಕೃತ ಆನಂದ ರಾಮಾಯಣವನ್ನು ದೊರಕಿಸಿಕೊಟ್ಟ ಊರಕೇರಿಯ ಶ್ರೀ ಸುಬ್ರಾಯ ವಿಷ್ಣು ಭಾಗವತ ವೈದ್ಯರಿಗೂ ಲೇಖಕನು ಕೃತಜ್ಞನಾಗಿದ್ದಾನೆ.

ವರಕವಿ ಬತ್ತಲೇಶ್ವರ ತಮ್ಮ ಭಾಗದವನೆಂದು ವಿಶೇಷ ಆದರಾಭಿಮಾನವುಳ್ಳ ಮತ್ತು ಉಪನ್ಯಾಸ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆಚವೆ-ಅಂಗಡಿಬೈಲಿನ ಹಾಗೂ ಸುತ್ತಲಿನ ಮಹಾಜನರಿಗೂ, ಈವಿಷಯದ ಕುರಿತು ಉಪನ್ಯಾಸ ಮಾಡಲು ನನ್ನನ್ನು ಆಮಂತ್ರಿಸಿದ ಆಗ ಪ್ರಸಾರಾಂಗದ ನಿರ್ದೇಶಕರಾಗಿದ್ದ ಶ್ರೀ ಚೆನ್ನವೀರ ಕಣವಿಯವರಿಗೂ ಈಗ ನಿರ್ದೇಶಕರಾಗಿರುವ ಶ್ರೀ ಎಸ್. ಬಿ. ನಾಯಕ ಅವರಿಗೂ, ಸಹಾಯಕ ನಿರ್ದೇಶಕ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ, ಕುಲಪತಿ ಡಾ. ಎಸ್. ಜಿ. ದೇಸಾಯಿಯವರಿಗೂ ಮತ್ತು ಸನ್ಮಾನ್ಯ ಓದುಗರಿಗೂ ವಂದನೆಗಳು,

ಕ್ಷಯ ನಾಮ ಸಂವತ್ಸರ
ಸಿದ್ದಾಪುರ
ಉ. ಕನ್ನಡ

ಎಲ್. ಆರ್. ಹೆಗಡೆ

ಪರಿವಿಡಿ

೧. ಕವಿಯ ವಿಷಯ

ಉತ್ತರ ಕನ್ನಡದಲ್ಲಿ ಅತ್ಯಂತ ಜನಪ್ರಿಯವಾದ ಬತ್ತಲೇಶ್ವರ ಕವಿಯ ರಾಮಾಯಣವನ್ನು ಡಾ. ಶಿವರಾಮ ಕಾರಂತರು "ಕೌಶಿಕ ರಾಮಾಯಣ"ವೆಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ತಮ್ಮ ಕಡೆ ಇದಕ್ಕೆ ಕೌಶಿಕ ರಾಮಾಯಣವೆಂಬ ಹೆಸರಿರುವುದೆಂದೂ ಒಂದೆರಡು ಪ್ರತಿಗಳಲ್ಲಿ "ಕೌಶಿಕ ರಾಮಾಯಣ ಬರೆವುದಕ್ಕೆ ಶುಭಮಸ್ತು" ಎಂದೂ ಇದೆಯೆಂದೂ ಅವರು ಬರೆದಿದ್ದಾರೆ.

ಆದರೆ, ಇದನ್ನು ಬರೆದವನು ಉತ್ತರ ಕನ್ನಡದ ಸಹ್ಯಾದ್ರಿ ಪರ್ವತದ ಸಮೀಪ ಇದ್ದ ಹವ್ಯಕ ಕವಿಯೆಂದೂ ಅವರೂ ತಿಳಿಸಿದ್ದುಂಟು. ಉತ್ತರ ಕನ್ನಡದ ಹಲವು ಪ್ರತಿಗಳಲ್ಲಿ "ವಾಲ್ಮೀಕಿ ರಾಮಾಯಣ ಬರೆವುದಕ್ಕೆ ಶುಭಮಸ್ತು" ಎಂದೇ ಉಂಟು. ವರದ ವಿಠ್ಠಲ ಎಂಬ ಅಂಕಿತದಿಂದ ಬರೆದ "ಕೌಸಲ್ಯಾವಿವಾಹ" ಎಂಬ ಕಾವ್ಯವೂ ಈ ರಾಮಾಯಣದ ಪ್ರತಿಯಲ್ಲಿಯೇ ಸೇರಿ ದೊರೆವುದರಿಂದ ಬತ್ತಲೇಶ್ವರ ರಾಮಾಯಣಕ್ಕೂ ವಾಲಗಳ್ಳಿ ರಾಮಾಯಣವೆಂದೂ ಹೆಸರು ಬಂದಿರುವುದೂ ಉಂಟು.

ಕವಿಯು ಬಂಧವೇಳೇಳಾಯ್ತು... ಸುಜನರ ಬಂಧು ರಚಿಸಿದನೊಲಿದು ವಾಲ್ಮೀಕಿ ಮುನಿರಾಯ(೧೩-೪೯) ಎಂದು ೧೩ನೆಯ

ಸಂಧಿಯನ್ನು ಮುಗಿಸಿದ್ದಾನೆ. ಅವನು ತಿಳಿಸಿದಂತೆ ನಲವತ್ತೊಂಬತ್ತು ಪದ್ಯಗಳೇ ಆ ಸಂಧಿಯಲ್ಲಿವೆ. ಕಾವ್ಯ ಮಧ್ಯದಲ್ಲಿ "ವರ ಕವಿ ಬತ್ತಲೇಶ್ವರನೂ" ಎಂದು ಸಹ ಇರುವುದರಿಂದ ಬತ್ತಲೇಶ್ವರನೂ ಕನ್ನಡ ವಾಲ್ಮೀಕಿ ಮುನಿಯೂ ಒಬ್ಬನೇ ಎಂಬುದು ಸ್ಪಷ್ಟವಾಗುತ್ತದೆ.

'ಪ್ರಹ್ಲಾದ ಚರಿತೆ'ಯನ್ನು ಬರೆದ ಚೆನ್ನಿಗನು (ಸು.೧೭೦೦) "ಬತ್ತಲೇಶ್ವರ ವಾಲ್ಮೀಕಿಗಳಂಘ್ರಿಗೆ ಭಕ್ತಿಯಿಂದಲೆ ವಂದಿಸುವೆ" ಎಂದು ಬತ್ತಲೇಶ್ವರ, ವಾಲ್ಮೀಕಿ ಅಭಿನ್ನ ಎಂಬುದನ್ನು ಸ್ಪಷ್ಟ ಮಾಡಿದ್ದನು. ಇಲ್ಲಿ ವ್ಯಾಸರಾಯ ಭಾರತವನ್ನು ಬರೆದವನು ಎಂದು ಏಕವಚನದಲ್ಲಿ ಹೇಳಿ ಬತ್ತಲೇಶ್ವರ ವಾಲ್ಮೀಕಿಗಳಂಘ್ರಿಗೆ ಎಂದು ಬಹುವಚನ ಪ್ರಯೋಗ ಮಾಡಿದುದನ್ನು ಲಕ್ಷಿಸಬೇಕು. ಇಲ್ಲಿ ಸಂಸ್ಕೃತ ಮಹಾಕವಿ ವಾಲ್ಮೀಕಿ ಮುನಿಯನ್ನು ಬತ್ತಲೇಶ್ವರ ವಾಲ್ಮೀಕಿಯನ್ನು ಸೇರಿಸಿದುದರಿಂದ ಬಹುವಚನ ಪ್ರಯೋಗವಿದೆಯೆಂದು ಹೇಳಬಹುದಾದರೂ ಚೆನ್ನಿಗನ ಕಾಲದಲ್ಲಿ ಬತ್ತಲೇಶ್ವರ ವಾಲ್ಮೀಕಿ ಜೀವಿಸಿದ್ದುದರಿಂದಲೇ ಅವನ ಅಂಘ್ರಿಗೆ ಭಕ್ತಿಯಿಂದಲೆ ವಂದಿಸುವೆ ಎಂದು ಗೌರವಪೂರ್ವಕವಾಗಿ ಬರೆದಿರುವನೆಂದು ಅನುಮಾನಿಸಲು ಎಡೆಯಿದೆ.

"ರುಂಡಭೈರವನ ಕಾಳಗ" ಎಂಬ ಚಿಕ್ಕ ಕಾವ್ಯವೂ ಬತ್ತಲೇಶ್ವರನೇ ರಚಿಸಿದುದಾಗಿದ್ದು ಪ್ರಕಟವಾಗಿದೆ. "ಐರಾವಣನ ಕಾಳಗ" "ಮೂಲಕಾಸುರನ ಕಾಳಗ" ಅಲ್ಲದೆ ಅಪ್ರಕಟಿತವಾಗಿರುವ "ಗೋಕರ್ಣ ಪುರಾಣ" ಸಹ ಇದೇ ಕವಿಯ ಕೃತಿಗಳು ಎಂದು ಶ್ರೀ ಎನ್. ಕೆ. ಹೆಗಡೆಯವರ ಅಭಿಪ್ರಾಯವಿದೆ.

"ರುಂಡಭೈರವನ ಕಾಳಗ" ಸಹ ವಾಲ್ಮೀಕಿ ರಚಿತವೆಂದೂ ಅದನ್ನು ನಿರ್ವಾಣವರರಾಘವ ಚರಿತವೆಂದೂ ಹೇಳಿ ವೀರಭೈರವ ಇತ್ಯಾದಿ ಭೈರವ ಶಬ್ದವನ್ನೂ 'ಬತ್ತಲೇಶ್ವರ' ಎಂಬುದಕ್ಕೆ ಪ್ರತಿ ಪದವನ್ನಾಗಿ ಕವಿ ಪ್ರಯೋಗಿಸಿರಬಹುದು. ಎಂದು ಶ್ರೀ ಎಸ್. ಎಸ್. ಕೃಷ್ಣ ಜೋಯಿಸರ ಅಭಿಪ್ರಾಯ.

ನಿರ್ವಾಣ ಎಂಬುದೂ ಭೈರವ ಬತ್ತಲೆ ಎಂಬುದರ ಪರ್ಯಾಯವಾಚಿ ಶಬ್ದಗಳಾಗಿರುವಂತೆ ಕಾಣುತ್ತದೆ.

"ಗೋಕರ್ಣ ಪುರಾಣ" ನೂರಕ್ಕೂ ಹೆಚ್ಚು ಸಂಧಿಗಳಿರುವ ಭಾಮಿನೀಷಟ್ಪದಿಯ ಕಾವ್ಯವಾಗಿದೆ. ಗೋಕರ್ಣದ ಮತ್ತು ಸುತ್ತುಮುತ್ತಲಿನ ತೀರ್ಥಕ್ಷೇತ್ರಗಳ ಮಾಹಾತ್ಮ್ಯವನ್ನು ತಿಳಿಸುವ ಈ ಕಾವ್ಯದಲ್ಲಿ ರಾಮಾಯಣದ ಕಥೆ ಹತ್ತು ಸಂಧಿಗಳಲ್ಲಿ ಬರುತ್ತದೆ.

ಇಲ್ಲಿನ ಕಥೆಯಲ್ಲಿ ಬತ್ತಲೇಶ್ವರ ರಾಮಾಯಣಕ್ಕೆ ವಿಶಿಷ್ಟವಾದ ಕಾಕಾಸುರನು ಸೀತೆಯ ಎದೆಯನ್ನು ಒದೆದು ಗಾಯ ಮಾಡಿದ ಕಥನವೂ ಉಂಟು. ಇಲ್ಲಿಯ ಅಂಗದನೂ ಹನುಮನು ರಾವಣನ ಮೋರೆ (ಗಡ್ಡ ಮೀಸೆ), ಸುಟ್ಟುದನ್ನು ನೋಡಬಂದೆ ಎಂದು ರಾವಣನೊಡನೆ ಹೇಳಿದ್ದಾನೆ. ಅಲ್ಲದೆ, ಭಿನ್ನವಾದ ರೀತಿಯ ಕಥನವೂ ಉಂಟು. ಭರತನು ಕಾಲು ಮುದು ಮಂಥರೆಯ ಕೊಲಿಸಿದ ಎಂಬುದು ಬತ್ತಲೇಶ್ವರ ರಾಮಾಯಣದಲ್ಲಿಲ್ಲ, ಶಂಬೂಕನನ್ನು ರಾಮ ನೋಯಿಸಿದ ಎಂಬ ಕಥೆಯೂ ಸ್ವಲ್ಪ ಬೇರೆಯಾಗಿದೆ.

ಶೈಲಿಯಲ್ಲಿ ತುಂಬ ಹೋಲಿಕೆಯಿದೆ. ಕಪಳೆಗಳು "ಸುರ ವಿಭಾಡನ ತೋಟಿ ಬೇಡೋ ಎಂದುದು ಗೋಕರ್ಣ ಪುರಾಣ ದಲ್ಲಿದೆ. 'ಅಸುರಕುವರನ ತೋಟಿ ಬೇಡಾ' ಇದು ಬತ್ತಲೇಶ್ವರ ರಾಮಾಯಣದ್ದು. 'ಕೊಂದು ಕೂಗುವುದು'; 'ಹೊರಸೆ' ಕಾಡು ಪಾರಿವಾಳ, ಎಂದು ಬಯ್ದುದು ಅಲ್ಲದೆ, ಇತರ ಪಲವು ಹೋಲಿಕೆಗಳಿವೆ.

ಬತ್ತಲೆಯಾಗು, ಭೈರವನಾಗು ಎಂಬ ಶಬ್ದಗಳನ್ನು ಕವಿ ಒಂದೇ ಅರ್ಥದಲ್ಲಿ ಬಳಸಿರುವನಷ್ಟೇ ? ಆದರೆ, ಬತ್ತಲೇಶ್ವರ ಎಂಬ ಹೆಸರನ್ನು ನಮ್ಮ ಭಾಗದಲ್ಲಿ ಇಡುವ ಪದ್ಧತಿಯಿಲ್ಲ. ಗಂಡುಮಕ್ಕಳಿಗೆ ಯಾಣದ ದೇವರ ಹೆಸರನ್ನು ಭೈರವೇಶ್ವರ ಎಂದು ಇಡುತ್ತಾರೆ. ಒಕ್ಕಲಿಗರು ಬೈರ ಎಂದೂ ಹೆಣ್ಣುಮಕ್ಕ ಳಿಗೆ ಬೈರಿ ಎಂದೂ ಕರೆಯುತ್ತಾರೆ. ಅದರಿಂದ ಈ ಕವಿಯ ಪೂರ್ವಾಶ್ರಮದ ಹೆಸರು ಭೈರವೇಶ್ವರ ಎಂಬುದಾಗಿತ್ತು ಎಂದರೆ, ಸಮಂಜಸವೆನಿಸೀತು. ಯಾಣ ಮತ್ತು ಗೋಕರ್ಣಗಳ ಸಮೀಪದ ಯಾವುದೋ ಊರಿನಲ್ಲಿ ಹುಟ್ಟಿ ಬೆಳೆದ ಕವಿಯೆಂದು ಊಹಿಸಬಹುದು.

ಬತ್ತಲೇಶ್ವರ ರಾಮಾಯಣದಲ್ಲಿ ಜಟ್ಟಿಗ ಮಾಣಿಭದ್ರರ ಉಲ್ಲೇಖವಿದೆ. ಜಟ್ಟಿಗ ಉತ್ತರಕನ್ನಡದಲ್ಲಿ ಎಲ್ಲಾ ಕಡೆ ಇದ್ದರೂ ಮಾಣಿಭದ್ರ ಗೋಕರ್ಣದಲ್ಲಿರುವ ದೇವತೆ. ಅಲ್ಲಿ ಸಮುದ್ರ ಬೇಲೆಯ ಬಳಿಯಲ್ಲಿ ಈತನ ದೇವಾಲಯವಿದೆ.

ಕವಿಯು ಕನ್ನಡದಲ್ಲಿ ಮಾತ್ರವಲ್ಲದೆ, ಸಂಸ್ಕೃತದಲ್ಲಿಯೂ ಬಹಳ ಗ್ರಂಥಗಳನ್ನು ಓದಿದ ದೊಡ್ಡ ವಿದ್ವಾಂಸನಾಗಿದ್ದಿರಬೇಕು.

ಸಂಸ್ಕೃತ ವಾಲ್ಮೀಕಿ ರಾಮಾಯಣ, ಮಹಾಭಾರತ, ಕಾಲಿದಾಸನ ಗ್ರಂಥಗಳು, ಭವಭೂತಿಯ ಉತ್ತರರಾಮ ಚರಿತ, ಅಲ್ಲದೆ, ವಾಲ್ಮೀಕಿ ರಚಿತವೆಂಬ ಅಧ್ಯಾತ್ಮರಾಮಾಯಣ, ಇವನ್ನಲ್ಲದೆ, ಆನಂದ ರಾಮಾಯಣ, ಶ್ರೀಮದ್ಭಾಗವತ ಗ್ರಂಥಗಳನ್ನೂ ವ್ಯಾಸಂಗ ಮಾಡಿದ್ದನು. ಗ್ರಹಗಳ ಕೂಟವನ್ನು ಕೊಟ್ಟಿದ್ದರಿಂದ (೧–೬೬)ಜ್ಯೋತಿಷಶಾಸ್ತ್ರದ ಪರಿಚಯವೂ ಈತನಿಗಿದೆ. ಸಂಗೀತ ಶಾಸ್ತ್ರದಪರಿಚಯವೂ ಇದೆ.

ವೇದಾಂತದಲ್ಲಿ ಪರಿಶ್ರಮವಿರುವ ಇವನು ಸ್ಮಾರ್ತಸಂಪ್ರದಾಯದವನಾಗಿದ್ದು, ಅದ್ವೈತ ತತ್ತ್ವದ ತಿಳಿವಳಿಕೆ ಈತನಿಗೆ ಚೆನ್ನಾಗಿ ಇದೆ. ಯಜ್ಞಯಾಗಾದಿಗಳನ್ನು ಮಾಡುವ ಕ್ರಮವೂ ಈತನಿಗೆ ತಿಳಿದಿತ್ತು.

ಕನ್ನಡದ ಜನ್ನ, ಪಂಪ, ರನ್ನ, ಹರಿಹರ, ರಾಘವಾಂಕ, ನಾಗಚಂದ್ರ, ಬಸವಾದಿ ಶಿವಶರಣರು, ಲಕ್ಷ್ಮೀಶ, ಚಾಮರಸ, ಕುಮಾರವಾಲ್ಮೀಕಿ, ಕುಮಾರವ್ಯಾಸ, ಪುರಂದರದಾಸ ಮುಂತಾದವರ ಕೃತಿಗಳನ್ನು ಈತ ಓದಿರುದಕ್ಕೆ ಆಂತರಿಕ ಪ್ರಮಾಣಗಳಿವೆ. ಕುದುರೆ ಎಂಬ ಅರ್ಥದಲ್ಲಿ ಬೊಲ್ಲ (ಕರಿಯ ಬೊಲ್ಲನ) ಎಂಬ ಶಬ್ದವನ್ನು ಬಳಸಿರುವುದರಿಂದಲೂ ಮಂಗರಾಜ ನಿಘಂಟುವಿನ ಪರಿಚಯ ಈತನಿಗಿದ್ದಿರಬೇಕು. ಎಲ್ಲಾ ಕವಿಗಳಿಗಿಂತಲೂ ಕುಮಾರವ್ಯಾಸನನ್ನು ಈತನು ಹೆಚ್ಚಾಗಿ ಅನುಕರಿಸಿದ್ದಾನೆ; ಯುದ್ಧವರ್ಣನೆಯಲ್ಲಿಯೂ ಇಡೀ ಗ್ರಂಥದುದ್ದಕ್ಕೂ ಕುಮಾರವ್ಯಾಸನ ಶೈಲಿ ಅಲ್ಲಲ್ಲಿ ಕಾಣುತ್ತದೆ.

೨. ಕಾಲ

"ಹೊಯ್ಸಣರ ನಾರೀವೃಂದ ಹೂರಿಗೆಗಳನು ಬಡಿಸಿದುದು" ಎಂದು ಹೇಳಿರುವುದರಿಂದ ಹೊಯ್ಸಳರು ಅಧಿಕಾರ ಕಳೆದುಕೊಂಡು ಸಾಕಷ್ಟು ಕಾಲ ಕಳೆದ ಮೇಲೆ ಬರೆದುದರಿಂದ ರಾಮನ ಮದುವೆಯ ಸಂದರ್ಭದಲ್ಲಿ ಅವರ ನೆನಪನ್ನು ತಂದಿದ್ದಾನೆ.

ತೀರ ಪ್ರಾಚೀನ ಕಾಲದಲ್ಲಿ ಕೆಂಪು ಮೆಣಸು ನಮ್ಮ ದೇಶದಲ್ಲಿ ಇದ್ದಿರಲಿಲ್ಲ. ಮೇಲೋಗರಕ್ಕೂ ಇತರ ತಿಂಡಿ–ತೀರ್ಥಗಳಲ್ಲಿಯೂ ಮೆಣಸಿನಕಾಳು ಹುಡಿಯನ್ನೇ ಬಳಸುತ್ತಿದ್ದರು. ಆದರೆ, ಈ ಕವಿಯು ಚಾರು ಮೆಣಸಿನ ಕರೆಯನ್ನು ಮದುವೆಯ ಊಟದಲ್ಲಿ ಬಡಿಸಿದರೆಂದು ಬರೆದಿದ್ದಾನೆ. (೨–೬೮) ಚಾರು ಅಂದರೆ, ಸುಂದರವಾದ ಎಂದು ಕೆಂಬಣ್ಣದಿಂದೊಪ್ಪುವ ಮೆಣಸಿನಕಾಯಿಗಳಿಗೇ ಅನ್ವಯಿಸುತ್ತದೆ. ಓಳಿ ಮೆಣಸನು (೧೧-೨೦) ಎಂಬಲ್ಲಿ 'ಓಳಿ' ದ್ವಿತೀಯಾಕ್ಷರ ಪ್ರಾಸ ಸ್ಥಾನದಲ್ಲಿದ್ದುದರಿಂದ ಈ ಪಾಠ ಸುನಿಶ್ಚಿತವಾಗಿದೆ. ಮೆಣಸಿನ ಓಳಿಮಾಡಿ, ಸಾಲಾಗಿ ನೆಡುವುದೂ ಮೆಣಸಿನ ಬಳ್ಳಿಗಳನ್ನಲ್ಲ; ಮೆಣಸಿನಕಾಯಿ ಗಿಡಗಳನ್ನು.

ಮೆಣಸಿನಕಾಯಿಗಳನ್ನು ಪೋರ್ತುಗೀಜರು ಗೋವೆಗೆ ತಂದು ಪ್ರಚಾರ ಗೊಳಿಸಿದರು. ಇಂದಿಗೂ ನಮ್ಮ ಕಡೆ ಮೆಣಸಿನ

ಣಾಯಿಗಳಿಗೆ ಗೋವೆಕರೆ ಎಂದೇ ಹೇಳುತ್ತಾರೆ. ಮೊದಲು ಗೋವೆಯಿಂದಲೇ ತಂದು ಬೆಳೆಸಿದ್ದೇ ಇದಕ್ಕೆ ಕಾರಣ.

ವಾಸ್ಕೋಡಿ ಗಾಮಾ ಭಾರತಕ್ಕೆ ಬಂದುದು ೧೪೯೭-೯೮ ರಲ್ಲಿ.[೧] ಆಮೇಲೆ, ಪೋರ್ತುಗೀಸರು ಸಿಲೋನ, ಸುಮಾತ್ರಾ, ಮತ್ತು ಮಸಾಲೆ ದ್ವೀಪಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ, ಗೋವೆಯನ್ನು ಆಕ್ರಮಿಸಿದರು. ಇದರಿಂದ ಈ ಕವಿಯು ಕ್ರಿ. ಶ. ೧೫೦೦ರಿಂದ ಈಚೆಯವನೆಂಬುದು ಸ್ಪಷ್ಟವಾಗುತ್ತದೆ.

ಈ ಕಾವ್ಯದಲ್ಲಿ ಮಾರಿ, ಮಾರಿಕವ್ವೆ ಈ ಹೆಸರುಗಳು ಹಲವೆಡೆ ಬರುತ್ತವೆ. ಮಾರಿಕವ್ವೆ ಎಂಬ ಶಬ್ದ ಮಾರಿಕಾಂಬೆ ಎಂಬ ಅರ್ಥದಲ್ಲಿ ಇಲ್ಲಿ ಬಂದಿರುವಂತೆ ಕಾಣುತ್ತದೆ. ವೀರಭದ್ರನ ಕೆಣಕಿ ಹೊಗುವರೆ ಮಾರಿಕವ್ವೆಯ ಮರೆಯನು ಎಂದು ಇದೆ. ಸಿರ್ಸಿಯ ಮಾರಮ್ಮನನ್ನು ಹಾನುಗಲ್ಲಿನಿಂದ ತಂದು ಪ್ರತಿಷ್ಠಿಸಿದುದು ಶಕವರ್ಷ ೧೬೨೧ ಶುಕ್ಲ ಸಂ॥ದ ವೈಶಾಖಶುದ್ಧ ಅಷ್ಟಮಿ ಮಂಗಳವಾರ, ಅಂದರೆ, ಕ್ರಿ. ಶ. ೧೬೮೮ರಲ್ಲಿ (ಮಾರಿಕಾಂಬೆ ಲೇ. ವಿನೀತ, ಸಿರ್ಸಿ)

ಚೆನ್ನಿಗನು ಸ್ತುತಿಸಿದ ಬತ್ತಲೇಶ್ವರನು ಸುಮಾರು ಕ್ರಿ. ಶ. ೧೭೦೦-ರಲ್ಲಿ ಈ ಕಾವ್ಯವನ್ನು ಬರೆದಿರಬೇಕೆಂದು ತಿಳಿವುದು ಸತ್ಯಕ್ಕೆ ಸಮೀಪವಾದುದು. ಶ್ರೀಕೃಷ್ಣ ಜೋಯ್ಸರ ಪ್ರಕಾರ ಈ ರಾಮಾಯಣದ ದೊರೆತ ತೀರ ಪ್ರಾಚೀನ ಪ್ರತಿ ೧೭೬೩ ರದು.

---

೧. World History, Rebellow, Mangalore. P. 105–106.

೩. ಆಕರಗಳು

ಈ ಕವಿಯು ವಾಲ್ಮೀಕಿರಾಮಾಯಣವನ್ನು ಮುಖ್ಯವಾಗಿ ಅನುಸರಿಸಿದ್ದರೂ ವ್ಯತ್ಯಾಸವಿರುವೆಡೆಗಳಲ್ಲಿ ಕಥಾ ವಿಷಯದಲ್ಲಿ ಸಂಸ್ಕೃತ ಆನಂದ ರಾಮಾಯಣವನ್ನು ಅನುಸರಿಸಿರುವುದನ್ನು ಶ್ರೀಜೋಯ್ಸರು ತೋರಿಸಿದ್ದಾರೆ.

ಸೀತಾಸ್ವಯಂವರದಲ್ಲಿ ರಾವಣನೂ ಬಂದು ಅಪಮಾನಿತ ನಾದುದೂ, ಐರಾವಣನು ರಾಮಲಕ್ಷ್ಮಣರನ್ನು ಒಯ್ದ ಕಥೆಯೂ ಲಂಕಾದಹನದಲ್ಲಿ ಹನುಮಂತನು ರಾವಣನ ಗಡ್ಡ ಮೀಸೆಗಳನ್ನು ಸುಡುವುದೂ ಸೀತೆಯಿಂದ ಹನುಮನು ಕುರುಹನ್ನು ಪಡೆದ ತರುವುದೂ, ರಾವಣನ ಜೀವವಿರುವೆಡೆಯನ್ನು ತಿಳುಹುವುದೂ ಯಾಗದಲ್ಲಿ ರಾವಣನ ಕಡಿದ ತಲೆಗಳು ಹರನ ವರದಿಂ ಪುನಃ ಚಿಗುರುವುದೂ ರಾವಣ ವಧಾನಂತರ ಹನುಮನನ್ ಕಾಶಿಗೆ ಕಳುಹಿ ರಾಮನು ಮಳಲಲಿಂಗ ಸ್ಥಾಪಿಸುವುದೂ, ಹನ ಮನು ಅದನ್ನು ಕೀಳಲು ಹವಣಿಸಿ ಬೀಳುವುದೂ, ಇಂದ್ರಜಿತ ನಿಕುಂಭಿಲಾ ದೇವಿಯಿಂದ ವರ ಪಡೆಯಲು ನರಮುಂಡ–ಮಾ ಮಾಂಸ ಇತ್ಯಾದಿಗಳಿಂದ ಯಜ್ಞಮಾಡುವುದೂ ಹನ್ನೆರ ವರ್ಷ ನಿದ್ರಾಹಾರ ತ್ಯಜಿಸಿದವನೇ ಇಂದ್ರವೈರಿಯನ್ನು ಕೊ ಬೇಕೆಂಬ ಬ್ರಹ್ಮನ ವರವೂ (ಹಾಗೆ ಬಿಟ್ಟವನು ಲಕ್ಷ್ಮಣ) ಆನಂ ರಾಮಾಯಣದಲ್ಲಿದ್ದು, ಕವಿ ತನ್ನ ಪ್ರತಿಭೆಯಿಂದ ಇವನ್ನು ಸ್ವ ಮಾರ್ಪಾಟುಮಾಡಿ ಬಳಸಿದ್ದಾನೆ. ತನ್ನ ದೇಶ ಭಾಗಗಳ

ಕಡಿದು ಅಗ್ನಿಗಾಹುತಿ ಮಾಡುವುದು ಇಲ್ಲಿನ ಹೊಸ ಬಣ್ಣನೆ. ಬ್ರಹ್ಮ ನೀಡಿದ ವರದ ಉಲ್ಲೇಖ ಅಧ್ಯಾತ್ಮ ರಾಮಾಯಣದಲ್ಲೂ ಇದೆ. ರಾವಣ-ಜಟಾಯುಯುದ್ಧದಲ್ಲಿ ಇಬ್ಬರೂ ತಮ್ಮ ತಮ್ಮ ಮರ್ಮಸ್ಥಾನ ತಿಳಿಸುವುದು (ರಾವಣ ಪಾದಮೂಲದಲ್ಲಿದೆ ಎಂದು ಸುಳ್ಳು ನುಡಿದಿದ್ದನು.) ತೊರವೆರಾಮಾಯಣದಲ್ಲಿಯೂ ಇಲ್ಲಿಯೂ ಇರುವುದು ಜನಪದ ರಾಮಾಯಣ ಕಥೆಯಲ್ಲಿಯೂ ಕಾಣುವ ಅಂಶ. ಇಲ್ಲಿ ವಿವರದಲ್ಲಿ ಭಿನ್ನತೆಯೂ ಉಂಟು.

ರಾವಣಯಾಗವನ್ನು ಕೆಡಿಸಲು ಅಂಗದ-ಹನುಮರು ಬರುವ ಸಂದರ್ಭದಲ್ಲಿ ರಾವಣನು ಮಂಡೋದರಿಯ ಸೀರೆ ಸೆಳೆದ ಅಂಗದನನ್ನು ತುಂಡು ಮಾಡಿದ ಸಂಗತಿ ತೊರವೆ ರಾಮಾಯಣದಲ್ಲಿದ್ದುದನ್ನು ಇಲ್ಲಿ ಅನುಸರಿಸಿದ್ದಾನೆ.

ಈ ರಾಮಾಯಣಗಳಲ್ಲಿ ಕಾಣದ ಹಲವು ವಿವರಗಳು ಬತ್ತಲೇಶ್ವರನಲ್ಲಿವೆ. ಅಹಲ್ಯೆಯನ್ನು ಸೂರ್ಯನೂ ಇಂದ್ರನೂ ಕೂಡಿ ವಾಲಿ ಮತ್ತು ಸುಗ್ರೀವ ಜನ್ಮತಳೆದರೆಂಬುದು ಒಂದು. ಮಂಥರೆ ದುಂದುಭೀ ಎಂಬ ಗಾಂಧರ್ವಿ. ಕಾರ್ಯಾರ್ಥಸಿದ್ಧಿಗಾಗಿ ಮಂಥರೆಯಾಗಿ ಜನಿಸಿದಳೆಂಬ ಆನಂದ ರಾಮಾಯಣದ ಹೇಳಿಕೆ ಇಲ್ಲಿಲ್ಲ.

ಆನಂದ ರಾಮಾಯಣದಲ್ಲಿ ತಪಸ್ಸು ಮಾಡಿದ ಶೂರ್ಪನಖಾ ಪುತ್ರ ಸಾಂಬ ಇಲ್ಲಿ ಜೈನರಾಮಾಯಣದಲ್ಲಿಯಂತೆ ಶಂಬುಕ. ತೊರವೆ ರಾಮಾಯಣದ ಶಂಬುಕ ತಪಸ್ವಿಯ ಕಥೆ ಸ್ವಲ್ಪ ಬೇರೆ. ಅಲ್ಲಿ ಇಂದ್ರಪದವಿಗೆ ಮನಸ್ಸುಮಾಡಿ ಶಂಬುಕ ತಪಸ್ಸು ಮಾಡಿದ್ದು ಇಂದ್ರ ಸೃಜಿಸಿದ್ದ ಮಾಯಾಸೂಕರನಿಗೆ

ಲಕ್ಷ್ಮಣನು ಹೊಡೆದ ಬಾಣ ಹುತ್ತ ಬಗಿದು ಶಂಬುಕ ನನ್ನು ಕೊಂದಿತು. ಇಲ್ಲಿ ಕುಬೇರನಿಂದ ಅಪಮಾನಿತನಾದ ಶಂಬುಕ ಅವನನ್ನು ಕೊಲ್ಲಲೆಳಸಿ ತಪಸ್ಸು ಮಾಡುವಾಗ ಲಕ್ಷ್ಮಣ ನಿಂದ ಖಡ್ಗದಿಂದ ವಧಿಸಲ್ಪಟ್ಟನು.

ಸೀತಾ ಸ್ವಯಂವರದ ಊಟ ಮಾಡಿ ಕೊಬ್ಬಿದ ಬಸುರಿನ ಹಾರುವನು ಬರುವಾಗ ಆತನ ಉಡೆದಾರವನ್ನು ಹರಿದ ಮಂಥರೆ ರಾಮನಿಂದ ಹೊಡೆತ ತಿಂದು ಅವನ ವೈರಸಾಧಿಸಲು ಕೈಕೆಯಿಗೆ ಚಾಡಿ ಹೇಳಿದುದು, ಕುಂಭಕರ್ಣನನ್ನು ನಿದ್ರೆಯಿಂದ ಏನು ಮಾಡಿದರೂ ಎಬ್ಬಿಸಲಾಗದಿರಲು ನಾರದನು ಬಂದು ವೀಣಾ ವಾದನ ಮಾಡಲು ಕುಂಭಕರ್ಣ ಎಚ್ಚೆತ್ತುದೂ ಬಹುಶಃ ಈ ಕವಿಯ ಹೊಸ ಕಲ್ಪನೆಗಳು.

ಶ್ರೀ ರಾಮನೇ ಮಹಾವಿಷ್ಣುವೆಂಬುದನ್ನು ರಕ್ಕಸರಾದ ರಾವಣ, ಇಂದ್ರಜಿತ್ತು, ಮಾರೀಚ, ಕುಂಭಕರ್ಣ ಮೊದಲಾದ ವರೂ ತಿಳಿದಿದ್ದರೆಂಬುದನ್ನು ಬಣ್ಣಿಸಿದ ಕವಿಯು ರಾಮಭಕ್ತಿ ಕಾವ್ಯದ ಉದ್ದಕ್ಕೂ ಪ್ರೋಣಿಸಿದಂತಿದೆ. ರಾಮನ ವಿಷ್ಣುರೂಪ ವನ್ನು ಇಂದ್ರಜಿತ್ತು ಅಲ್ಲದೆ, ರಾವಣನೂ ನೋಡಿದ ಬಣ್ಣನೆಯಿದೆ.

ಕಾಕಾಸುರ ಸಂದರ್ಭವು ಇಲ್ಲಿಯೂ ಬಂದಿದ್ದರೂ ರಾಮನು ನಿದ್ರಿಸಿದ್ದಾಗ ಸೀತೆಯ ಕಾಲಿನ ಹೆಬ್ಬೆರಳನ್ನು ಮಾಂಸವೆಂದು ಭ್ರಮಿಸಿ ಕುಕ್ಕಲಿಲ್ಲ. ಅವಳ ಅವಿರಳಸ್ತನಗಳನ್ನು ಸೋಂಕುವ ತವಕದಲ್ಲಿ ಎದೆಯನ್ನು ಒದೆದನೆಂಬ ನಿರೂಪಣೆ ಇಲ್ಲಿ ವಿಶಿಷ್ಟ ವಾಗಿದೆ.

ಅಧ್ಯಾತ್ಮ ರಾಮಾಯಣದಲ್ಲಿ ವಾಲಿಯೊಡನೆ ಗುಹೆಯಲ್ಲಿ ಹೋರಾಡಿದ ಮಾಯಾವಿ ಮಯನ ಮಗ. (ಅ. ರಾ. ದಲ್ಲಿ ರುಮರ್ಣದ) ಇಲ್ಲಿ ಮಾಯಾವಿ ದುಂದುಭಿ ದೈತ್ಯನ ಮಗ– ಇದಕ್ಕೆ ಆಧಾರ ವಾಲ್ಮೀಕಿ ರಾಮಾಯಣ. ಆದರೆ, ಹನುಮಜನ್ಮ ಕಥೆ ಸ್ವಲ್ಪ ಬೇರೆ ರೀತಿಯಲ್ಲಿದೆ.

ರಾಮನು ಹನುಮನೊಡನೆ ಸೀತೆಗೆ ಹೇಳಲು ತಿಳಿಸಿದ ಕುರುಹುಗಳಲ್ಲಿ ಹೊಸತನವಿದೆ. ಅವರ ಮದುವೆಯಲ್ಲಿ ಸೀತಾ– ರಾಮರು ಹಸೆಯಲ್ಲಿ ಕುಳಿತಿದ್ದಾಗ ಒಬ್ಬನು ಭಾವಚಿತ್ರದಲ್ಲಿರುವ ಹೆಣ್ಣಿನ ಬೊಂಬೆಯನ್ನು ಕುಣಿಸಿದನು. ಇದು ಬಹುಶಃ ತೊಗಲು ಗೊಂಬೆಯಾಟ. ಆಗ ಸೀತೆ ಅಸೂಯೆಯನ್ನು ತಾಳಿ ಕನಲಿದ್ದು ಒಂದು. ಸಂಧ್ಯಾವಂದನೆಗೆಂದು ನೀರನ್ನು ಸೀತೆ ತರುವಾಗ ನೀರಲ್ಲಿ ಅವಳ ಪ್ರತಿಬಿಂಬ ಬಿದ್ದುದು ಮೀನೆಂದು ಭ್ರಮಿಸಿ, ನೀರನ್ನು ಅವಳು ಚೆಲ್ಲಿದಾಗ ರಾಮ ನಕ್ಕಿದ್ದು ಇನ್ನೊಂದು ಕುರುಹು. ಜನಪದರಾಮಾಯಣದ ಗೀತಕಥೆ ಇದನ್ನು ಹೋಲುತ್ತದೆ.

ಇದಲ್ಲದೆ. ಇನ್ನು ಹಲವು ಸಂದರ್ಭಗಳಲ್ಲಿ ಈ ಕವಿ ಹಿಂದಣ ಕವಿಗಳಿಂದ ಕೆಲವು ಸೂಚನೆಗಳನ್ನು ಗ್ರಹಿಸಿಯೂ ಹೊಸರೀತಿಯಿಂದ ಕಥೆಯನ್ನು ಬೆಳೆಸಿಕೊಂಡು ಬಂದಿರುತ್ತಾನೆ. ವಿಶ್ವಾಮಿತ್ರನಿಗೆ ಎರಗದ ರಾವಣ ಏಳದಿರಲು ಋಷಿ ಉಂಗುಷ್ಠ ವನ್ನೂರಲು ಆಸನದಿಂದ ಬಿದ್ದು ರಾವಣ ಮುನಿಗೆರಗಿದುದೂ, ಯುದ್ಧಮಧ್ಯದಲ್ಲಿ ರಾಮನು ರಾವಣನಿಗೆ ವಿಶ್ವರೂಪವನ್ನು ತೋರಿದುದೂ ಅವುಗಳಲ್ಲಿ ಕೆಲವು.

೪. ಭಾವಪ್ರಕಟಣ ನೈಪುಣ್ಯ

ಮಾನವೀಯ ಸಹಜಭಾವನೆಗಳನ್ನು ಚಿತ್ರಿಸುವಲ್ಲಿ ಕವಿಯು ಅಸಾಧಾರಣ ಪ್ರತಿಭೆಯನ್ನು ತೋರಿದ್ದಾನೆ.

ಮಕ್ಕಳನ್ನು ಮುದ್ದಾಡಿ ಆನಂದದಿಂದ ನಾಡು ಬೀಡಿನ ಪಾರುಪತ್ಯ ಮಾಡಲೂ ಮರೆತ ದಶರಥನು,

ಅಪ್ಪಿ ತೊಡಿಗೆಯ ತೇಟ್ಟು ಸುತರೊಳ
ಗೊಪ್ಪವನು ನೋಡುತ್ತ ಕಾಯದ
ಮುಪ್ಪು ಮರೆದಮರತೆಯ ಪಡೆದವನಂತೆ
ಹಿಗ್ಗಿದನು॥ ೧–೭೩.

ಮುನಿಯು ಪುತ್ರಶೋಕದಲಳಿವು ನಿನಗೆ ಎಂದು ಶಪಿಸಿ ಪ್ರಾಣ ಬಿಟ್ಟಾಗ ದಶರಥನು, "ಶಾಪವೇ ವರವಾಯ್ತು" ಎಂದು ಆನಂದಿಸಿದ ಬಣ್ಣನೆ ಹೇಗೆ ಸಹಜವೋ ಹಾಗೆಯೇ ಪ್ರತಿಭಾವ್ಯಂಜಕವಾಗಿದೆ (೧-೩೨)

ಆದರೆ, ರಾಮನನ್ನು ವನವಾಸಕ್ಕೆ ಕಳುಹು ಎಂದು ಕೈಕೆ ಹೇಳಿದಾಗ ಎದೆಯಲ್ಲಿ ಅಲಗು ಮುರಿದಂತೆ ಕಂಬನಿಯೊಸರೆ ಶೋಕಿಸಿದ ರಾಜನು ಶಿಶುವನಗಲಿದ ಬಳಿಕ ತಾನು ಉಳಿವನಲ್ಲ; ಶಾಪವಿದೆ ಎಂದುದೂ, ರಾಮನು ನಿನ್ನ ಮಾತು ಕಾಯಲು ಅರಣ್ಯಕ್ಕೆ ಹೋಗುವೆ ಎಂದಾಗ, ಚೌಡಲನ ವಧೆ ತನಗೆ ತಾಗಿತ್ತು

ತನ್ನ ಹರಣವಳಿವುದು ಎಂದು 'ಮೂಗ ನಂಜನು ಕುಡಿದ ಹಂ
ಯಲಿ ಮೌನದಲಿ' ಅತ್ತನು ಎಂಬುದೂ, ಮುದಿಯನಿಗೂ
ಇರುವ ಜೀವದಾಸೆಯ ಸುಂದರ ಚಿತ್ರಣ. ವಾಲ್ಮೀಕಿರಾಮಾಯಣ
ದಲ್ಲಿ ಪ್ರಾಣಬಿಡುವ ಸಂದರ್ಭದಲ್ಲಿ ದಶರಥನು ಮುನಿಶಾಪದ
ಕಥೆಯನ್ನು ಕೌಸಲ್ಯೆಗೆ ಹೇಳುತ್ತ ಅಳುತ್ತ ಅಳುತ್ತ ಪ್ರಾಣ
ಬಿಟ್ಟನೆಂದಿದೆ.

ಭರತನು ಅಜ್ಜನ ಮನೆಯಿಂದ ಬಂದು ವಿಷಯ ತಿಳಿದು
ಗೋಳಿಟ್ಟೊರಗಿದಾಗ ಕೈಕೆ ಬಂದು ಯಾಕೆ ಹೊಟ್ಟೆ ಬಡಿದು
ಕೊಂಡು ಅಳಲುವೆ? ಬಳಲುವೆ? ಮಲಮಗನ ನಾಣಡವಿಗಟ್ಟಿದೆ.
ತಲೆಯ ಬಡಿದೇತಾಯ್ತು ನಿನಗೆ?" ಎಂದು ಸ್ವಾರಸ್ಯವಾಗಿ
ಕೇಳಿದಾಗ ಭರತನು ಖಡ್ಗ ಹಿರಿದು ಪಾಪಿಯ ಕೊಲುವೆ ಎಂದು
ಓಡಿ ಬಂದಾಗ ಆಕೆ "ಕೊಲ್ಲಬೇಡ" ಎನ್ನುತ್ತಲೇ ಓಡಿಹೋಗಿ
ಮನೆಯ ಕದವಿಕ್ಕಿಕೊಂಡಳು ; ಬೀಸುವ ದೊಣ್ಣೆ ತಪ್ಪಿದರೆ
ಸಾವಿರ ವರ್ಷ ಆಯುಷ್ಯ ಎಂಬಂತೆ !

ತರುಣನಾದ ಮಗನ ಹರಣ ಈ ಕ್ರಮದಿಂದ ಉಳಿಯು
ತ್ತದೆ; ಮುದಿಗಂಡನು ಹೇಗೂ ಸ್ವಲ್ಪ ಕಾಲದಲ್ಲಿ ಸಾವವನೇ
ಎಂದು ತಿಳಿಸಿದಿದ್ದಳು ಈಕೆ!

ರಾಮನ ಕಪಿಪಡೆಗೆ ಕಡೆಗಾಣದೆ 'ಹಲವು ಕಣ್ಣು'ಗಳಿಂದ
ನೋಡಿದ ರಾವಣನ ಆಶ್ಚರ್ಯ ಸೊಗಸಾಗಿ ಬಣ್ಣಿತವಾಗಿದೆ. ಈ
ಇಪ್ಪತ್ತು ಕಣ್ಣಿ ನೋಟದ ಬಣ್ಣನೆ ಉಚಿತವಾಗಿಯೂ ಇದೆ.
"ಗಿಡುಮರಂಗಳ ಕಪಿಗಳಾದುವೊ! ಪೊಡವಿ ಮುಸು (ಮುಶ್ಯ)
ಗಳ ಸೀಮದೊ! ಇಲ್ಲಿ ನೆಲವು ಬೆಸಲೆಯಾದದ್ದು ಬೇಡರನ್ನಲ್ಲ;

ಕೋಡಗಳನ್ನು! ಇವನ್ನು ತನ್ನ ಇಪ್ಪತ್ತು ಕೈಗಳ ನೂರು ಬೆರಳುಗಳಿಂದಲೂ ಲೆಕ್ಕಮಾಡಲು ಸಾಧ್ಯವಿಲ್ಲವೆಂದು, ತನ್ನ ಗುಂಪುತಲೆಗಳನ್ನು ತೂಗಿ, (ಹತ್ತು) ಮೂಗುಗಳಿಗೆ (ನೂರು) ಬೆರಳುಗಳಿನ್ನಿಟ್ಟು ತನ್ನ ಬೆರಗನ್ನು ತೋರಿಸಿದನು.

ಇಲ್ಲಿ ವಾಲಿಯು ಸನ್ನಿವೇಶವೂ ಸಂಭಾಷಣೆಗಳೂ ತೀರ ಚಿಕ್ಕವಾಗಿವೆ. ರಾಮನು, ನಿನಗೆ ಬದುಕುವ ಇಚ್ಛೆಯಿದ್ದರೆ ಕಾಪಾಡುತ್ತೇನೆ. "ಎಂದ ಮೇಲೆ ವಾಲಿ ಕೊಟ್ಟ ಉತ್ತರವು· "ಸಾವು ಹೇಗಾದರೂ ಬರುವುದಲ್ಲವೇ ? ನಿನ್ನಿಂದ ಮರಣ ಶ್ರೇಯಸ್ಕರ' ಎಂಬುದು ವಾಲ್ಮೀಕಿ ರಾಮಾಯಣದಲ್ಲಿಲ್ಲ. ಇಲ್ಲಿ ಸಂಭಾಷಣೆ ಹ್ರಸ್ವವಾಗಿದ್ದುದು ಒಂದು ರೀತಿಯಿಂದ ಸಹಜ ವೆಂದೆನಿಸಿದರೂ (ರಾಮಬಾಣಹತನಾದವನು ವಾಲಿಯೇ ಆದರೂ ಹೆಚ್ಚು ಮಾತಾಡುವ ಶಕ್ತಿ ಇರಲಿಲ್ಲವೆಂದು ತಿಳಿದರೂ) ಕವಿಪ್ರತಿಭೆಗೆ ಇಲ್ಲಿ ಲೋಪ ಬಂದಿದೆ.

ಲಕ್ಷ್ಮಣನು ಯುದ್ಧದಲ್ಲಿ ಬಿದ್ದಾಗಿನ ರಾಮನ ದುಃಖದಲ್ಲಿ ಅವನು ತನಗಾಗಿ ಮಾಡಿದ ತ್ಯಾಗವನ್ನೂ ಪಟ್ಟ ಕಷ್ಟವನ್ನೂ ಸಹಜವಾದ ಸರಳವಾದ ತೀವ್ರಶೋಕಾವೇಗವನ್ನು ಬಣ್ಣಿಸಿದ ಶೈಲಿ ಸತ್ವಪೂರಿತವಾಗಿದೆ. ಸಿರಿಯನೊಲ್ಲದೆ ಪುರವನೊಲ್ಲದೆ ಸರಸಿಜಾಸನೆ ಸತಿಯನೊಲ್ಲದೆ ಬಂದ ನೀನು, ತಾಯಿ ತಂದೆಯ ಗಲಿಕೆಯ ದುಃಖವನ್ನೂ ಜಾಯೆ (ಸತಿ) ಸೆರೆಯಲ್ಲಿರುವ ಶೋಕ ವನ್ನೂ ಎಲ್ಲವನ್ನೂ ಮರೆತು ಕಾಯುವನ್ನು ಹಿಡಿದಿರ್ದ ತನ ಬಾಯಲಿ ಮಣ್ಣನಿಕ್ಕಿದೆ. ರಾವಣನ ಹತ್ತು ತಲೆ ಕಡಿದರೇನ್ನ ಫಲ ? ಲಂಕೆಯನ್ನು ನಾಶಗೈದರೇನು ಫಲ ? ಜಾನಕಿಯ

ತಂದೇನು ಫಲ ? ನಾನು ಬದುಕಿದರೆ ಏನು ಫಲ ? ಸುಡಲೀ ಬದುಕನು; ಹರಣವನ್ನ ನಿನ್ನೊಡನೆಯೇ ಬಿಡುವೆನು ಎಂದು ರಾಮನು ಶೋಕಿಸಿದ್ದಾನೆ.

ಹನುಮನೊಡನೆ ತೋಡಿಕೊಂಡ ಸೀತಾ ದುಃಖ (೧೨: ೪೦-೪೫) ಇಂದ್ರಜಿತುಯುದ್ಧದಲ್ಲಿ ಕೆಡೆದ ರಾಮನನ್ನು ನೋಡಿ ಮಾಡಿದ ಸೀತಾದುಃಖ (೨೯ : ೭-೧೭) ಮಾಯಾ ಸೀತೆಯ ದುಃಖ (೩೧: ೩೭-೪೩), ಇಂದ್ರಜಿತು ಮರಣದಲ್ಲಿನ ಅವನ ತಾಯಿ ಮತ್ತು ಪತ್ನಿಯರ ದುಃಖ (೩೭ : ೧-೧೨) ಮುಂತಾದವು ತುಂಬಾ ಹೃದಯಸ್ಪರ್ಶಿಯಾಗಿವೆ. ಕಡಿದು ತುಂಡಾದ ಅಂಗದನ ದೇಹವನ್ನು ರಾಮನ ಮುಂದೆ ತಂದಿಟ್ಟಾಗ, ರಾವಣನ ಹೋಮವನ್ನು ಹಾಳುಮಾಡಲು ಅಂಗದನನ್ನೂ ಹನುಮನನ್ನೂ ಕಳಿಸಿದ್ದಕ್ಕೆ ಅವನನ್ನು ರಾಮನು ನಿಂದಿಸಿದಾಗ ಹನುಮನು, "ದಾನವಮಲ್ಲ ಕೊಲುವಾಗ ಈತನೊಡನೆ ಸಾಯದೆ ಉಳಿದೆ, ಸೇವೆಯಲ್ಲಿ ಬದುಕುವುದಕ್ಕಿಂತ ಸಾವು ಅತಿಸುಖ" ಮುಂತಾಗಿ ಶೋಕಿಸುತ್ತಾನೆ. ಇಲ್ಲಿ ಡಾ. ಕಾರಂತರ ಗ್ರಂಥದಲ್ಲಿನ ಕೆಲವು ಪದ್ಯಗಳು ಹಿಂದು-ಮುಂದಾದಂತಿವೆ. (೩೮: ೪೯,೫೦, ೫೪-೫೯)

ಮಾಲ್ಯವಂತನ ಬುದ್ಧಿವಾದದ ಅನಂತರ ಪರಮಾತ್ಮನೆ ಲೀಲೆಯಿಂದ ಎಲ್ಲವನ್ನೂ ನಡೆಸುತ್ತಾನೆ ಎಂದು ಹೇಳಿಯೂ ರಾವಣನು ಸಹಜವಾದ ರೀತಿಯಲ್ಲಿ ದುಃಖಿಸುವ ಶ್ರೇಷ್ಠ ಪದ್ಯಗಳು ಕಾಣುತ್ತವೆ. ಅನರಣ್ಯ, ರಂಭೆ, ವೇದವತಿ ಇವರೆಲ್ಲರು ಶಪಿಸಿದುದನ್ನು ನೆನೆದು ಪರಿತಪಿಸುತ್ತಾನೆ. (೨೩: ೨೭-೩೫)

ದಾಳಿಮಾಡಿದ್ದ ಶಂಬುಕದೈತ್ಯನನ್ನು ಸೋಲಿಸಿ, ಅವನ ಮುಡಿಯನ್ನು ಕೂರಲಗಿನಿಂದ ಬಾಚಿ ಕುಬೇರನು ಪ್ರಾಣ ಭಿಕ್ಷೆಯನ್ನು ನೀಡಿದ ಮೇಲೆ, ಸೇಡಿನ ಛಲದಿಂದ ಶಂಬುಕನು ಕಠಿಣ ತಪನ್ನು ಮಾಡಲು ಉಕ್ಕಿನ ದಬ್ಬಣದಲ್ಲಿ ತನ್ನ ತಲೆಯ ನ್ನೂರಿ ತಲೆಕೆಳಗಾಗಿನಿಂದ ಸನ್ನಿವೇಶವನ್ನು ಸಹ ಕವಿ ತಲ್ಲೀನತೆ ಯಿಂದ ಬಣ್ಣಿಸಿದ್ದಾನೆ.

ಮರೆದನಾತನು ಮನೆಯ ಮಕ್ಕಳ
ತೊರೆದನಾಹಾರವನು ಕೋಪದಿ
ಕರೆಗೊರಳ ಶಂಕರನ ಭಜಿಸಿದ ಧನಪ ವೈರದಲಿ"

ಇಲ್ಲಿ ಮನೆಯ ಮಕ್ಕಳ ಮರೆದ ಎಂಬಲ್ಲಿ, ಮಡದಿಮಕ್ಕಳ ಎಂದು ಇದ್ದರೆ ಲೇಸಾಗುತ್ತಿರಲಿಲ್ಲವೇ ? ಎಂದು ಒಮ್ಮೆ ವಿಚಾರ ಬಂದರೂ ಗೃಹಿಣೀ ಗೃಹಮುಚ್ಯತೇ ಎಂಬ ಮಾತಿನ ಪ್ರಕಾರ ಮನೆಯ ಎಂಬಲ್ಲಿ ಮನೆ, ಮತ್ತು ಮಡದಿ ಎರಡೂ ಸೇರಿವೆಯೆಂದು ತಿಳಿಯಬಹುದು.

ಮೈಯಲ್ಲಿ ಒರಲೆಗಳು ಗುಡಿಗಟ್ಟಿದರೂ ಲೆಕ್ಕಿಸದೆ ಉಗ್ರ ತಪದಲ್ಲಿ ಜೀವದಾಸೆಯನ್ನು ತೊರೆದ ಶಂಬುಕನ ತಪಸ್ಸಿನ ಏಕಾಗ್ರತೆಯನ್ನು ಸಂಸ್ಮರಣೀಯ ರೀತಿಯಲ್ಲಿ ಕವಿ ನಿರೂಪಿಸಿ ದ್ದಾನೆ.

ಇಂದ್ರಜಿತ್ತು ಮಾಯಾಸೀತೆಯನ್ನು ತೋರಿ ಅವಳನ್ನು ಕಡಿವೆನೆಂದು ಕತ್ತಿಯನ್ನೆತ್ತಿದಾಗ ಅವಳು ಕೂಗಿ ಅಳಲು ರಾಮನು ಶೋಕಿಸುತ್ತಾನೆ.

ಎಸುವ ಕೆಯ್ಯನು ಮರೆದ ನರಹರಿ
ಯಸುರಮಾಯೆಗೆ ಮರುಳುಗೊಂಡನು

ರಾಮನು ಹರಿಯಾದರೂ ನರನ ಮರೆವನ್ನು ಹೊಂದಿದ್ದ ನರಹರಿ ದುಃಖದಿಂದ ಪರವಶನಾದುದರ ಸೂಕ್ಷ್ಮಚಿತ್ರಣವಿದು. ಆಮೇಲೆ, ಇವಳು ಸೀತೆಯೇ ಎಂದು ಅರಿಯಲು ಬೇಕಾದ ಗುರುತುಗಳನ್ನು 'ಅಡಿಗಡಿಗೆ' ನೋಡಿದನೆಂಬ ನಿರೂಪಣೆಯೂ ಸೊಗಸಾಗಿದೆ.

ಪರವಶನಾದ ರಾಮನನ್ನು ನೋಡಿ ಸೀತೆ ಮಾಡಿದ ದುಃಖವು ಕರುಣರಸದ ಪರಾಕಾಷ್ಠೆಯಲ್ಲಿ ಬಂದಿದೆ. "ಉರಿವ ಕತ್ತರಿವಾಣ ಬಸುರಲಿ ಹರಿದ ಪರಿಯಾಯ್ತು" ಎನ್ನುವಲ್ಲಿ, ಉರಿ ಎಂಬಲ್ಲಿ, ತೀವ್ರ ವೇದನೆಯನ್ನು ಮಾಡುವ ಎಂಬ ರೂಢಿಯ ಅರ್ಥವಿದೆ. ಮುತ್ತಿನ ಸರವ ಸರಿಸಿ ಸಂಭ್ರಮಾಲಿಂಗನ ಮಾಡಿದ ನೆನಪು ಇಲ್ಲವೋ ? ನನ್ನನ್ನು ನೋಡಿಯೂ ನುಡಿಸದವನೇ, ಹರಣವಲ್ಲಭ. ಮರೆತೆಯೋ ? ನಿನಗೂ ನಿನ್ನ ಪಡೆಗೂ ನಾನೇ ಮಾರಿಯಾದೆ (ನನ್ನ ಪ್ರಮಾದದಿಂದಲೇ ನನ್ನ ಹರಣ: ಈ ಯುದ್ಧಕ್ಕೂ ಅದರ ಫಲಕ್ಕೂ ನಾನೇ ಕಾರಣ) ಎಂಬಲ್ಲಿ ತೀವ್ರ ಪಶ್ಚಾತ್ತಾಪ ಕಾಣುತ್ತದೆ.

ಆಕೆ, 'ಮಗನನಗಲಿಸಿ ಕೊಂದೆ ತಂದೆಯ' ಎಂದು ರಾಮನ ರಾಜ್ಯತ್ಯಾಗಕ್ಕೂ ತನ್ನ ಬುದ್ಧಿ ಹೀನತೆಗೂ ವಿಧಿಯನ್ನು ದೂಷಿಸುವುದು ಸಹಜ. ರಾಮನನ್ನು ಕೊಂದಂತೆ ಮೋಘನಾದ ತನ್ನನ್ನೂ ಯಾಕೆ ಕೊಲ್ಲಲಿಲ್ಲ ? ಎಂಬ ಆಕೆಯ ದುಃಖವೂ ಘನವಾದುದು.

೫. ಸನ್ನಿವೇಶ ರಚನೆ

ಓದುಗನೂ ಕೇಳುಗನೂ ಸೈ ಎಂದು ಮೆಚ್ಚುವಂತೆ ಸನ್ನಿವೇಶವನ್ನು ಸಹಜ ಮತ್ತು ಸಮಂಜಸ ಸಂಭಾಷಣೆಗಳಿಂದ ಬೆಳೆಸಿಕೊಂಡು ಹೋಗುವ ಕವಿಯ ಶಕ್ತಿಯನ್ನು ವಿಭೀಷಣನು ರಾವಣನನ್ನು ತ್ಯಜಿಸಿ ರಾಮನ ಬಳಿಗೆ ಬಂದ ಸಂದರ್ಭದ ಚಿತ್ರಣದಲ್ಲಿ ಕಾಣಬಹುದು.

ವಾಲ್ಮೀಕಿರಾಮಾಯಣದಲ್ಲಿ ವಾನರರೊಡನಿದ್ದ ಸುಗ್ರೀವನು ಇವನನ್ನು ನೋಡಿ, "ನಮ್ಮನ್ನು ಕೊಲ್ಲಲು ಬಂದ ರಾಕ್ಷಸ "ಎಂದೆನ್ನಲು, ಮರಗಳನ್ನೂ ಗಿರಿಗಳನ್ನೂ ಹಿಡಿದು, "ಪ್ರಭುವೇ, ದುಷ್ಟನಾದ ಇವನನ್ನು ಕೊಲ್ಲುವೆವು: ಅಪ್ಪಣೆ ನೀಡು" ಎಂದಾಗ ವಿಭೀಷಣನು ಸೀತಾಹರಣ ಮುಂತಾದ ಘಟನೆಗಳನ್ನು ಹೇಳುತ್ತಾನೆ.

ಆದರೆ, ಈ ಕಾವ್ಯದಲ್ಲಿ ವಿಭೀಷಣನು ತಾಯಿಯ ಆಶೀರ್ವಾದ ಪಡೆದು ಐದು ರತ್ನಗಳನ್ನು ಕಾಣಿಕೆಗೆಂದು ರಾಮನಿರುವೆಡೆಗೆ ಬಂದಾಗ, ಮರ್ಕಟಗಳು ಸಮುದ್ರದ ತಡಿಯಲ್ಲಿ ಗುಂಪಾಗಿ ನಿಂದು ಈ ರತ್ನದೀಧಿತಿಯನ್ನು ಕಂಡು ಬೆರಗಾದರು ಎಂದು ಪೀಠಿಕೆಹಾಕಿದ್ದಾನೆ.

ಕೊರಳಲ್ಲಿ ತುಳಸೀದಂಡೆಧರಿಸಿ ರಾಮನಾಮ ಜಪಿಸುತ್ತಲೇ ಬಂದುದನ್ನು ನೋಡಿ. "ಹಿಡಿಹಿಡಿರಕ್ಕಸನ ಕಡಿಕಡಿ"

ಎಂದು ಮರ್ಕಟರು ಮುತ್ತಿದರೆಂದುದು ತುಂಬ ಸಹಜವಾಗಿದೆ. ವಿಭೀಷಣನು ಸ್ತುತಿಸಿ, 'ಪೊರೆಯೋ' ಎಂದು ರಾಮನನ್ನು ಕರೆದನೆಂಬುದು ವಿಭೀಷಣನ ಪರಾಕ್ರಮಕ್ಕೆ ಸಹಜವಲ್ಲವಾದರೂ ಈ ಸಂದರ್ಭಕ್ಕೆ ಉಚಿತವಾಗಿದೆ.

"ನಾವು ಹನುಮನ ಆಳುಗಳು, ಕೊಲ್ಲದಿರಿ" ಎಂದು ಹೇಳಿದಾಗ, ಕೆಲವರು "ಹನುಮನೆಲ್ಲಿ ಇವನೆಲ್ಲಿ ? ಕಪಟವಿದು ಕೊಲ್ಲುತಿವಿ" ಎಂದರು. ವಿಭೀಷಣನು 'ಹನುಮನೆಡೆಗೆ ಒಯ್ದು ಕೊಲುವುದು' ಎಂದನು. ಆಗ ಹನುಮನ ಬಳಿಹೋಗಿ, 'ಬಿನ್ನಹ, ದನುಜರು ಉಂಟೇ ನಿಮ್ಮ ಕೆಳೆಗೆ ? (ಗೆಳೆತನದಲ್ಲಿ)' ಎಂದು ಕಪಿಗಳು ಕೇಳುವುದು ತುಂಬ ಸಹಜವಾಗಿದೆ!

ವಿಭೀಷಣನು ರಾವಣನ ತಮ್ಮ ಇವನೆಂದು ಕಾವನೋ ಕೊಲಿಸುವನೋ ? ಎಂದು ಶಂಕಿಸಿದನು.

ವಿಭೀಷಣನನ್ನು ಕಾಯಲು ತನ್ನ ನಂಬಿಗೆಯ ಆಳುಗಳನ್ನು ನೇಮಿಸಿ ಹನುಮನು ರಾಮನ ಬಳಿಹೋಗಿ ಚರಣಕ್ಕೆ ರಗಿ ಹೊರಳಿದನು! ಕಪಿಗಳು ಚಪಲಚಿತ್ತರೆಂಬ ಶಂಕೆ ಅವನಿಗೆ!

ಮೂಲದಲ್ಲಿ ಸುಗ್ರೀವನು ಗೂಢಚಾರನಿರಬಹುದೆಂದು ಶಂಕೆಯನ್ನು ವ್ಯಕ್ತಮಾಡಿ ಒಳ್ಳೇ ವಾಗ್ಮಿತೆಯಿಂದ ರಾಜನೀತಿಯನ್ನು ಚಿತ್ತರಿಸುತ್ತಾನೆ. ಇದರಲ್ಲೆಲ್ಲಾ ಚಾತುರ್ಯವೂ ಹುರುಳೂ ಉಂಟು. ರಾಮನ ಘನವಾದ ವ್ಯಕ್ತಿತ್ವವೂ ಇಲ್ಲಿ ಚಿತ್ರಿತವಾಗಿದೆ. (ಯುದ್ಧಕಾಂಡ ಅಧ್ಯಾಯ ೧೭, ೧೮, ೧೯)

ಇಲ್ಲಿ 'ನೀನು ತಂದವನನ್ನು 'ನಾನು ಕಾವೆನು' ಎಂದು ಹನುಮನಿಗೆ ಹೇಳಿಯೂ "ಸೀತೆಯನ್ನು ಕೊಟ್ಟ ನಮ್ಮನ್ನು ಕಂಡರೆ ಕಾವೆ" ಎಂಬುದು ಸಮಂಜಸ ಎಂದೆನಿಸುವುದಿಲ್ಲ.

ಆಗ ವಿಭೀಷಣನು ಸಂಕ್ಷಿಪ್ತವಾಗಿ ವಿಷಯ ತಿಳಿಸಿ, "ಸೀತೆಯನ್ನು ರಾಮನಿಗೆ ಒಪ್ಪಿಸದಿದ್ದರೆ ನಮ್ಮನ್ನು ಕೊಲ್ಲುವನೆಂದಾಗ, ರಾವಣ ಖಡ್ಗ ಹಿಡಿದು ಏರಾಟಿಕೆ ಮಾಡಿ, "ರಾಮನನ್ನು ಕಾಳಗಕ್ಕೆ ಕರೆದು ತಾ, ಇಲ್ಲದಿರೆ ನಿನ್ನನ್ನು ಸೀಳಿ ಹೂಳುವೆ" ನೆಂದು ಬೆದರಿಸಿದುದರಿಂದ ಬಂದೆನೆಂದುದು ಸೊಗಸಾಗಿದೆ.

'ರಾವಣನು ಸೀತೆಯನ್ನು ತಂದಾಗಲೇ ನೀನು ಯಾಕೆ ಬರಲಿಲ್ಲ' ಎಂಬ ರಾಮನ ಪ್ರಶ್ನೆಗೆ, "ಹಿಂದಿರಿಸಿ(ರಕ್ಷಿಸಿ) ಕೊಂಬವರ ಕಾಣದೆ ಬರಲಿಲ್ಲ" ಎಂಬ ಉತ್ತರ ಸರಿಯಲ್ಲ. ಆದರೆ ವಿಭೀಷಣನನ್ನು ಪರೀಕ್ಷಿಸುವ ರಾಮನ ಮಾತು ಚಾತುರ್ಯವನ್ನು ತೋರಿಸುತ್ತದೆ.

ರಾಮನು "ತಾಯನ್ನೂ ಸೋದರರನ್ನೂ ಕಳೆದುಕೊಂಡು ಪಡೆಯಲು ಬಾರದು; ಅಣ್ಣನ ಬಳಿ ಹೋಗು" ಎಂದೆನ್ನಲು, ವಿಭೀಷಣನ ಭಾವಪೂರ್ಣವಾದ ಉತ್ತರವು "ತಾಪಗೊಳಿಸದಿರೆನ್ನನಕಟಾ...... ಅಮೃತ ಕಂಡ ಮೇಲೆ ವಿಷದಿಚ್ಛೆಯೇ" ಮುಂತಾಗಿ ಹೇಳುವುದು ಹೃದಯಂಗಮವಾಗಿದೆ. (೧೪: ೪೫-೬೭)

ಇಂದ್ರಜಿತುವಿನ ಯುದ್ಧದಲ್ಲಿ ರಾಮನು ಮೈಮರೆದು ಬಿದ್ದನು. "ಜಡೆಗೆದರಿ ಹುಡಿಹತ್ತಿದ ಮೊಗದ, ಮುಡಿದು ಓರೆ ಮುಗುಚಿದ ಗೋಣಿನ, ಅರೆಮುಚ್ಚಿದ ಕಂಗಳ, ರಕ್ತವಲ್ಲಿ ತೋದ ಉಡಿಗೆಗಳ ಬಸವಳಿದ ರಾಮ" ಎಂಬ ಚಿತ್ರವು ಕಣ್ಣಿಗೆ ಕಟ್ಟುವಂತಿದೆ. ಈ ಕವಿಯು ವರ್ಣನಾನಿಪುಣನು.

ಈ ಘೋರಯುದ್ಧದ ರಾತ್ರಿಯಲ್ಲಿ ಕಂಬನಿಗಳನ್ನು ರಾಕಾರವಾಗಿ ಸುರಿಸುತ್ತಾ, ಅರೆಜೊಂಪಿನಿಂದ ಒಲೆಯುತ್ತ, ದ್ದವರನ್ನು ತುಳಿಯುತ್ತ ಶೋಕಾರ್ತಸ್ವರವನ್ನು ಹೊರಡಿವ ವಿಭೀಷಣನ ಗೋಳಾಟದ ಬಣ್ಣನೆ ಸಣ್ಣದಾದರೂ ಹೃದವನ್ನು ಕಲಕುತ್ತದೆ. ನಾನೊಂದನ್ನು ನೆನೆದರೆ ವಿಧಿತ್ತೊಂದ ನೆನೆಯಿತು. ರಾಮನಿಂದ ನಾನು ಬದುಕುವೆನೆಂದು ನನ್ನು ಸೇರಿದರೆ ನನ್ನ ದೌರ್ಭಾಗ್ಯಕ್ಕೆ ಈ ತೆರನಾಯಿತು. ನು ಕಡು ಪಾಪಿ" ಎನ್ನುತ್ತ ರಾಮನ ಗುಣಗಳನ್ನು ನೆನೆದು ಬಾಯ್ಬಿಟ್ಟು ಶೋಕಿಸಿದನು. ಆಗ ಈ ಕೂಗಾಟ ಳಿ, ರಣದಲ್ಲಿ ಬಿಡದೆ ಗೋಳಿಡುತಿಪ್ಪನಾವನೋ ನುಡಿಸಕು 'ಎಂದು ಜಾಂಬವನು ಡೆಂಡಣಿಸುತ್ತ ಬಂದು ಕೇಳಿದಾಗ ೀಷಣನು"ಧರೆಗೆ ಭಾರಕ ಪಾಪಿ ನಾನು. ಆ ರಾವಣನ ್ರ ವಿಭೀಷಣನೆಂಬ ದುರ್ಭಾಗ್ಯ. ರಣರಂಗವನ್ನೆಲ್ಲ ಎರಡು ಯೋಜನ ಪರ್ಯಂತ ತೊಳಲಿದೆ. ಅರಸನೇನಾ ೋ" ಎಂದು ಶೋಕಿಸಿದುದು ನೈಜವೆಂಬಂತೆ ಬಂದಿದೆ.

ಮುಂದೆ ಈ ಇಬ್ಬರೂ ಹನುಮನನ್ನರಸಿ ತೊಳಲುತ್ತ ುವಾಗ 'ರಾಮ ಬಿದ್ದ, ಹನುಮನೆಲ್ಲುಳಿವ ?' ಎಂಬ ಇವರ ತನ್ನು ಕೇಳಿ ಹೆಣಗಳ ನಡುವೆ ನಿದ್ರೆಮಾಡಿದ್ದ ಹನುಮನು ಗಳನ್ನು ಬಗಿದೇಳುತ್ತ "ಸುಳಿವನಾವನೊ ಕೊಲ್ಲು. ಬದಿ ಎಲುವ ಮುರಿ" ಎಂದು ಗರ್ಜಿಸುತ್ತ ಎದ್ದನೆಂಬ ಬಣ್ಣನೆ ರಸ್ಯವಾಗಿದೆ, "ಸುಳಿವ ಪಾತಕಿ ನಾನು" ಎಂದು ವಿಭೀಷಣ ಲು 'ಬಿದ್ದವರ ತುಳಿಯದೆ ಬಾ" ಹೇಳುವಲ್ಲಿ ಬಿದ್ದ ಗಾಯಾಗಳ ಕುರಿತ ಎಚ್ಚರಿಕೆ ಕಾಣುತ್ತದೆ.

ಇಡೀ ಸನ್ನಿವೇಶವು ವಾಲ್ಮೀಕಿಯ ಚಿತ್ರಣಕ್ಕಿಂತ ಹೆಚ್ಚಿನ ವೈಶಿಷ್ಟ್ಯಪಡೆದು ಸೊಗಸಾಗಿದೆ (೨೯: ೧-೨೪)

ಅರ್ಥಗರ್ಭಿತ ಶೈಲಿ :

ಅರ್ಥಗರ್ಭಿತವಾದ ಮಾತುಗಳನ್ನು ಹೇಳುವಲ್ಲಿ ಕವಿಯ ಕೌಶಲ ಎದ್ದು ಕಾಣುತ್ತದೆ. ಸೀತೆಯನ್ನು ರಾಮನಿಗೊಪ್ಪಿಸು ಎಂದು ಕುಂಭಕರ್ಣನು ಬುದ್ಧಿಹೇಳುವಲ್ಲಿ 'ನೀನಾ ವಿಧಿಯ ಮೊಮ್ಮಗನು' ಎನ್ನುತ್ತಾನೆ. ಶಿವನು ಒಂದು ತಲೆಯನ್ನ ಚಿವುಟಿ ದುದರಿಂದಾಗಿ ವಿಧಿ ತಲೆಮೋಕ, ತಲೆಯಿಲ್ಲದವ, ಮೂರ್ಖ ನೀನು ಅವನ ತೆರಿಯೇ ಆನುವಂಶಿಕ ಜಡಬುದ್ಧಿಯವ ಎಂದು ಸೂಚಿಸುವುದು ಸ್ವಾರಸ್ಯವಾಗಿದೆ. (೨೪:೨೩)

ಕಂಗಳಿರೆ ಕಂಗಾಣನಾವನು
ಹೆಂಗಳಿಗೆ ಮರುಳಾದ ದಾನವ
ನಂಗಸಿರಿಗಳು ಹೋದ ಕೇಡನು ಕಂಡು ಕಂಡರಿತು ॥

ಹತ್ತು ಮುಖಗಳಲ್ಲಿ ಇಪ್ಪತ್ತು ಕಣ್ಣುಗಳಿದ್ದರೂ ಹಿಂದೆ ರಂಭೆ, ವೇದವತಿ ಮುಂತಾದ ಹಲವು ಹೆಂಗಳಿಗೆ ಮರುಳಾಗಿ ಶಾಪ, ತಾಪ ಪಟ್ಟುದನ್ನು ತಿಳಿದೂ ಮೋಹದಿಂದ ಕುರುಡನಂತಾದ ಎಂಬ ಸೂಚನೆ ಈ ಮಾತುಗಳಲ್ಲಿದೆ.

ಜಿನಸೇನರ ಪೂರ್ವ ಪುರಾಣದಲ್ಲಿ ಆದಿನಾಥ ಶಿಶುವಿನ ಸೊಬಗನ್ನು ನೋಡಲು ಇಂದ್ರನು ಸಾಸಿರಾಲಿಗಳನ್ನು ಧರಿಸಿದ ಬಣ್ಣನೆಯಿದೆ. ಇಲ್ಲಿ ಸೀತಾ ಸ್ವಯಂವರದಲ್ಲಿ ಸಖಿಯರು ಸೀತೆಗೆ "ನಿನ್ನಿರವ ನೋಡಲು ಸಾಸಿರಾಲಿಯ ಧರಿಸಿದನೊ" ಎಂದು

ಜಾರನೆಂದು ಅವನನ್ನು ಹೀಗಳೆವಲ್ಲಿ ಹೆಚ್ಚಿನ ಅರ್ಥಪುಷ್ಟಿಯಿದೆ.

ಹನುಮಂತನು ಯುದ್ಧದಲ್ಲಿ ರಾವಣನನ್ನು ಬಾಲದಿಂದ ಬಂಧಿಸಿದ್ದಾಗ ರಾವಣನ ಬಾಯಲ್ಲಿ ನೊರೆಸೂಸಿತ್ತು. ಆಗ ಹನುಮನು "ಕಂಡು ಬಲ್ಲಾ ?" ಎಂದು ಹಲ್ಗಿರಿದು ರಾವಣನನ್ನು ಹೀಯಾಳಿಸಿದನು. ಈ ಮಾತಿನಲ್ಲಿ ಎಷ್ಟು ಹುರುಳು ತುಂಬಿದೆ! ಹಿಂದೆ ರಾವಣನೇ ಹನುಮನನ್ನು ಬಂಧಿಸಿದುದನ್ನು ಇದು ನೆನಪಿಸುತ್ತದೆ. ಅಪಮಾನಗೊಳಿಸಲು ನನ್ನ ಬಾಲಕ್ಕೆ ಬೆಂಕಿ ಹಚ್ಚಿದುದರ ಪರಿಣಾಮವೇನಾಯಿತು ? ಮೊದಲು ನನ್ನ ಪರಾಕ್ರಮವನ್ನು ಕಂಡು ಬಲ್ಲವನಲ್ಲವೇ ? ನನ್ನ ಪರಾಕ್ರಮದ ಪರಿಚಯು ನಿನಗೆ ಹಿಂದೆಯೇ ಆಗಿದೆಯಲ್ಲವೋ ?"

ಇವಕ್ಕೆ ರಾವಣನ ಉತ್ತರವೂ ಸಹ ಆತ್ಮವಿಶ್ವಾಸದಿಂದ ಕೂಡಿ ಹನುಮಂತನನ್ನು ಸ್ವಾರಸ್ಯವಾಗಿ ಮೂದಲಿಸಿದೆ. ನಾಗಚಂದ್ರನ ರಾವಣನು 'ಕಲಿ ಸಾವಂ ಪಿಡಿ(ಸೆರೆ)ವಡೆವಂ ಕಲಹದೊಳಿದು ಭಂಗಮಲ್ತು" ಎಂದಿರುವ ಹಿರಿಮೆ ಕಂಡರೆ, "ಕಂಡು ನಾ ಬಲ್ಲಂತೆ ನೀನಾವ ದಿಕ್ಪಾಲ ?" (೨೨:೧೨) ಎಲ್ಲ ದಿಕ್ಪಾಲರನ್ನು ಸೋಲಿಸಿದ ಮಹಾವೀರ ತಾನು; ಆ ದಿಕ್ಪಾಲರಲ್ಲಿ ನಿನ್ನನ್ನು ನೋಡಿದ್ದಂತೆ ಕಾಣಲಿಲ್ಲ; ಎಂದು ಮೂದಲಿಸುವ ಬತ್ತಲೇಶ್ವರನ ರಾವಣ ಚಾತುರ್ಯ ರಾವಣಪಾತ್ರದ ಕುಗ್ಗದ ಧೈರ್ಯವನ್ನು ಇಲ್ಲಿ ತೋರುವಲ್ಲಿ ಹೆಚ್ಚಿನ ಪ್ರತಿಭೆಯನ್ನು ತೋರಿದೆ.

"ನಿನ್ನನು ಕಂಡೊಡೆ ಅರಿಯಲು ಕಾನ ಕೋಡಗ ಸ್ವರ್ಗದೊಳುಗುಂಟೆ ? ಎಂಬ ರಾವಣನ ಮಾತು ತುಂಬಾ ಸ್ವಾರಸ್ಯ

ವಾಗಿದೆ. "ನಿನ್ನಂತಹ ಕಾನ ಕೋಡಗಗಳು ದಂಡಕಾರಣ್ಯದ
ಹೇರಳವಾಗಿವೆ. ಆದರೆ, ನನ್ನ ಸ್ವರ್ಗದಿಗ್ವಿಜಯದ ಸಮಯದ
ನೀನು ಅಲ್ಲಿದ್ದಿರಲು ಸಾಧ್ಯವಿಲ್ಲ. ನೀನು ದೇವತೆಯಲ್ಲ" ಎ
ಅಭಿಪ್ರಾಯವುಂಟು. ಹನುಮನು, "ಹೊರಸೆ, ಬೆಳ್ಳಿಯ ಗು
ನೆತ್ತಿದ ಗರುವ (ಗರ್ವ) ಬೇಡವು" ಎಂದ ಮಾತಿನಲ್ಲಿ ಕ
ಪಾರಿವಾಳ ಹೊಕ್ಕ ಮನೆ ಹಾಳಾಗುತ್ತದೆ. ರಾವಣ ಹುಟ್ಟಿ
ಕುಲ ಹಾಳಾಗುತ್ತದೆ ಎಂಬ ಸೂಚನೆಯಿದೆ. ಕೈಲಾಸವ
ಬೆಳ್ಳಿಗುಂಡು; ಅದನ್ನೆತ್ತಿದ್ದು ಗರ್ವಪಡುವಂತಹದು ಅಲ್ಲ
ಅಲ್ಲ! ಎಂದು ಹನುಮಂತನ ಅಭಿಪ್ರಾಯ ಬಾದಿರುವಲ್ಲಿ ಸಾ
ಕತೆಯುಂಟು. ಅವನು ಪರ್ವತವನ್ನು ಎತ್ತಿದ್ದು ಮಾತ್ರವ
ಹೊತ್ತು ತರುವ ಸಾಮರ್ಥ್ಯ ಸಹ ಉಳ್ಳವನು. "ತಲೆಪೊರೆ
ನಿಳುಹುವೆ" ಎಂಬ ಮಾತಿನಲ್ಲಿ ನಿನ್ನ ಆ ಹತ್ತು ತಲೆಗಳು ಕೇ
ಹೊರೆ ತಲೆಗಳಿರುವಂತೆ ಬುದ್ಧಿ ನಿನಗಿಲ್ಲ ಎಂಬ ಸೂಚನೆ
ದೂಷಣೆಯಿದೆ. ನಾನು ಶಿವಿದರೆ, 'ನಿನ್ನವರು ನಿನ್ನ ಎಲುವ
ನ್ನೆಲ್ಲ ಆಯ್ದು ಸುಡಬೇಕಾದೀತು' ಎಂಬಲ್ಲಿ ನಿನ್ನ ಎಲುವು
ಚಲ್ಲಾಪಿಲ್ಲಿಯಾಗಿ ಹರಡಿ ಬಿದ್ದಾವು ಎಂದು ಸೂಚಿ
ಆಘಾತದ ಜೋರು ಕಾಣುತ್ತದೆ.

ರಾಮನು ಕುಂಭಕರ್ಣನ ಹತ್ತಿರ, "ನಿಲ್ಲು, ನಿಲ್ಲು,
ವಾಗು, ಕಾದು" ಎಂದಾಗ, "ನಿನಗಾನು ಸರಿಯೆ ?
ಬರುವೀ ಮಾತು ಸೊಸದು" ಎಂದೆನ್ನುವ ಕುಂಭಕರ್ಣ
'ಕಾದು ನಿಲ್ಲು', ಓಡಬೇಡ ಎಂಬ ಮಾತಿಗುತ್ತರವಾಗಿ ಯ
ದಲ್ಲಿ ಓಡಿ ಹೋಗುವುದು ತನ್ನ ಜಾಯಮಾನವೇ ಅಲ್ಲ.
ಹೋಗುವವನಿಗೆ ಈ ಮಾತನ್ನು ಹೇಳು: ಇಂಥ ಮಾ

ನಗೆ ಹೇಳುವ ಅವಶ್ಯವೇ ಇಲ್ಲ' ಎಂದು ಸೂಚಿಸಿದ್ದಾನೆ. ೨೫ನೇ ಸಂಧಿಯ ೪೦ನೇ ಪದ್ಯದ ಮಾತೂ ಕುಂಭಕರ್ಣನ ಾಂಭೀರ್ಯಕ್ಕೆ ಒಪ್ಪುವಂಥದು. ೪೪ನೆಯ ಪದ್ಯದಲ್ಲಿನ "ಆವ ಾವರೆ ನಿನ್ನ ಕಯ್ಯಲ್ಲಿ ನಿಂದು ಕಾದಿದೊಡಸುದು' ಎಂಬ ಮಾತು ಎರಡು ಅರ್ಥಗಳನ್ನು ಸೂಚಿಸುತ್ತದೆ. "ನಿನ್ನೊಡನೆ ಾವಲು ನಿಂದರೆ ಮಾತ್ರ ನಾನು ಸಾವುದು, ಇಲ್ಲದಿದ್ದರೆ ನಾವು ಾವವರೇ ಅಲ್ಲ; ನಾವು ಬೇರೆಯವರೊಡನೆ ಹೋರಾಡಿದಾಗ ಾವವರು ಅವರೇ, ನಾವಲ್ಲ.

ರಾಮ-ರಾವಣರ ಯುದ್ಧ ಸಂದರ್ಭದಲ್ಲಿನ "ಲಗ್ಗೆ ಗ್ಗಿತ್ತು. ಹೊಡೆವರಿಲ್ಲದೆ ವಾದ್ಯ ಮುಗಿಯಿತ್ತು."ಎಂಬ ನುಡಿ ಳು ರಾಕ್ಷಸ ಸೈನ್ಯದಲ್ಲಿ ಹೋರುವವರೆಲ್ಲರೂ ಸತ್ತರು; ಇಷ್ಟೇ ಲ್ಲ. ಭೇರಿ ಬಡಿವವರೂ ಕೂಡ ಎಲ್ಲರೂ ಸತ್ತು ಅಪರಿಮಿತ ಶವಾಯಿತು ಎಂದು ಸೂಚಿಸಿವೆ. ಮುಳುಗಿ ತುದಿ ಮಾತ್ರ ಣುವ ತಾಳೆ(ಮರ) ಮತ್ತು ತೆಂಗನ್ನು ಏರಿ (ಕೂತು) ಕಾಗೆ ಳು ರಕ್ತನದಿಯ ರಕ್ತವನ್ನು ಕುಡಿದವೆಂಬ ಬಣ್ಣನೆ ರಕ್ತದ ಹಾಪೂರವನ್ನೇ ಸೂಚಿಸುತ್ತದೆ.

ಸತ್ತವರ ದೇಹಗಳನ್ನು ಘಾಲಿನಂತೆ ಮರೆವಿಡಿದ ಬಣ್ಣನೆ ನ್ನು ಕುಮಾರವ್ಯಾಸ ಮಾಡಿದ್ದರೆ, ಇಲ್ಲಿ ಬಡವರ ಹಿಡಿದು ಲಕೆ ನೆಗಹಿ ಮರೆವಿಡಿದು, ಎಂಬಲ್ಲಿ ಜೀವಂತ ಕಪಿಗಳನ್ನೇ ತ್ತಿಹಿಡಿದರು ಎಂದಿರುವಲ್ಲಿ ಬಡವರು ಎಂಬ ಶಬ್ದವು ಸಿರಿ ತಿಕೆಯ ಕೊರತೆಯುಳ್ಳ ಕಪಿಗಳನ್ನು ಸೂಚಿಸದೆ, ಮೈಬಡ ದ ಶೌರ್ಯದ ಬಡತನವುಳ್ಳ ಕಪಿಗಳನ್ನು ಸೂಚಿಸುತ್ತದೆ.

೬. ಹಾಸ್ಯದೃಷ್ಟಿ

ಕನ್ನಡ ಕವಿಗಳಲ್ಲಿ ಹಾಸ್ಯದೃಷ್ಟಿ ಧಾರಾಳವಾಗಿರುವ ಕೆಲವೇ ಕವಿಗಳಲ್ಲಿ ಬತ್ತಲೇಶ್ವರ ಮೇಲ್ಮೆಯ ಸ್ಥಾನ ಪಡೆಯುತ್ತಕ್ಕ ವನು. ಕೆಲವು ಮಾತು-ರೀತಿಗಳಲ್ಲಿ ಹಿಂದಿನ ಕವಿಗಳನ್ನು ಈ ವಿಷಯದಲ್ಲಿ ಸಹ ಅನುಸರಿಸಿ ತನ್ನ ವೈಶಿಷ್ಟ್ಯವನ್ನು ತೋರಿಸು ತ್ತಾನೆ. ಸರ್ವಜ್ಞನಿಂದ ಬಹುಶಃ ಪ್ರೇರಣೆ ಪಡೆದು ಅಕ್ಕಿಗೆ ಅರು (ಅರಿ) ಎಂದು ಹೇಳುವ ಲಂಕೆಯ ತಮಿಳು ವ್ಯಾಪಾರಿಗಳ ಠಕ್ಕುತನವನ್ನು ಬಣ್ಣಿಸಿದ್ದಾನೆ!

ಸೀತಾಸ್ವಯಂವರ ಸಂದರ್ಭವು ಕುಮಾರವ್ಯಾಸನ ದ್ರೌಪದೀ ಸ್ವಯಂವರದ ನೆನಪನ್ನು ತರುತ್ತದೆ. ಸಖಿಯರು ಬ್ರಹ್ಮನನ್ನು ಲೇವಡಿ ಮಾಡುವ ಸೊಗಸಿನಲ್ಲಿ ಕವಿಯ ವೈವಿಧ್ಯ ಹೆಚ್ಚಿನ ಹಾಸ್ಯವನ್ನುಂಟು ಮಾಡುತ್ತದೆ.

ಧರಣಿಸುತೆ ನೋಡಕ್ಕ ನಿನ್ನಯ
ಸಿರಿಗೆ ಮುದಿ ಹಾರುವನು ಬಂದನು
ಪರಿಣಯದ ಮನಸಾಯ್ತಲಾ
ನರೆಗಡ್ಡದವಗೆನುತ॥ ೯: ೧೪

ದಕ್ಷಿಣೆಯ ರೊಕ್ಕವನ್ನು ಹಾರುವ ಮುದಿ ಹಾರುವನು ಸೀತೆಯ ಸಿರಿಗೆ ಅಂದರೆ, ಸಂಪತ್ತಿಗೂ ಸೌಂದರ್ಯಕ್ಕೂ ಆಸೆ ಮಾಡಿವನು ಎಂಬ ಅರ್ಥಗಳು ಇಲ್ಲಿವೆ.

ಸುಬಿಯರು ಅಷ್ಟದಿಕ್ಪಾಲಕರನ್ನೂ ರಾವಣ ಮುಂತಾದ ಸ್ವಯಂವರದ ಅಭ್ಯರ್ಥಿಗಳನ್ನೂ ಲೇವಡಿಮಾಡುತ್ತಾರೆ. ರಾವಣನು ಹತ್ತು ತಲೆ, ಇಪ್ಪತ್ತು ತೋಳು ಧರಿಸಿದ ಜೋಷ (ವೇಷ) ದಂಡದಲಿ! ಹೆಚ್ಚಿನ ತೋಳುತಲೆ ಹುಟ್ಟಿನಿಂದ ಬಂದುವಲ್ಲ; ಕಟ್ಟಿಕೊಂಡು ಬಂದವು ಎಂದು ಸೂಚಿಸುತ್ತಾರೆ. ಧನುವನ್ನೆತ್ತಲಾರದೆ ಬಿದ್ದು ರಕ್ತಕಾರಿದ ರಾವಣ ತುತ್ತು ಸವಿ, ಆದರೆ, ತನ್ನ ಬಾಯಿಗೆ ಹೋಗದು ಎಂದು ತನ್ನನ್ನು ತಾನೇ ಸಂತೈಸಿಕೊಂಡನಂತೆ-ಗೊಂದಣದ ತಲೆ, ತೋಳುಗಳು ಭಾರವನ್ನೇ ಹೆಚ್ಚಿಸಿ ಬೀಳಲು ಸಹಾಯಕವಾದವು.

ನಮ್ಮ ಜಿಲ್ಲೆಯಲ್ಲಿ ಗಾದೆಮಾತಿನಂತೆ ಜನಪ್ರಿಯವಾದ "ಕರೆದು ಕಚ್ಚಿಸಿಕೊಂಡ ಮುಸಿಮುಸುಡ" ಎಂಬ ನುಡಿ ಈ ಕಾವ್ಯದಲ್ಲಿ ಅನೇಕ ಕಡೆ ಬಂದು ರೂಢವಾಗಿದೆ. ಹಸಿದು ತಿರುಗಿದ ನಾರಿಯು ಕರೆದು ರಾವಣ ಕಚ್ಚಿಸಿಕೊಂಡ ಮುಸಿಮುಸುಡ. ಇಲ್ಲಿ ಮುಸು (ಕೋಡಗ) ಎಂಬ ಶಬ್ದದಿಂದ. ಮುಸುಡು ಎಂಬ ಶಬ್ದ ಬಂದಿದೆ.

ಈ ಮುಸಿಮುಸುಡನ ಹತ್ತು ತಲೆ, ಇಪ್ಪತ್ತು ತೋಳು, ನೂರು ಬೆರಳುಗಳನ್ನು ಲೇವಡಿ ಮಾಡಿದಷ್ಟೂ ಕವಿಗೆ ತೃಪ್ತಿಯಿಲ್ಲ ರಾವಣನಿಗೆ ತೋಳಿಪ್ಪತ್ತು, ಎರಡೇ ತೊಡೆ, ಕಾಂಬರಿಗೆ ಅಚ್ಚರಿ ಎಂದು ರಾಮನಿಂದ ಹೇಳಿಸಿದ್ದಾನೆ ಯುದ್ಧಕ್ಕೆ ಬಂದ ರಾವಣ ಹತ್ತು ಮುಖಗಳಿಂದಲೂ ಬೊಬ್ಬಿಟ್ಟುದನ್ನು ರಾಮನು ಹೀಗೆ ಹಾಸ್ಯಮಾಡಿದ್ದಾನೆ.

ಕೆಳಗೆ ಸಾವಿರೆ ದನುಜ ಹಾರುತ
ನೆಳಲ ಮಾಡಿದನೆಮಗೆ ಬಹುಮುಖಿ
ನೊಲಿಮು ಕೂಗಿದ ಮರನ ಕೋಡಗಿಯಂತೆ ಮೇಲಿದ್ದು!!

ಇಪ್ಪತ್ತು ತೋಳುಗಳು ಮರದ ಟೊಂಗೆಗಳಂತೆ ನೆರಳು ಮಾಡಿದವು. ಮರನ ಕೋಡಗಿಯು ಬೊಬ್ಬೆಯು ಸ್ವರ ಚಿರಪರಿಚಿತವಾಗಿದ್ದದೇ–ಆದರೆ, ಈ ಬೊಬ್ಬೆಯು ಸ್ವರವು ಒಲಿದು ಕೂಗಿದ ಸ್ವರವಂತೆ!

ಇನ್ನೊಮ್ಮೆ, "ಹಲವು ನಾಲಗೆಯಲ್ಲಿ ಕೂಗಲಿಯೆಂದ ರಘುರಾಯು"

ಹನುಮನು 'ಹಲವು ತಲೆ ಬಹು ಬುದ್ಧಿ' ಎಂಬಲ್ಲಿ ಬಹಳ ಬುದ್ಧಿ ಎಂಬ ಹೊಗಳಿಕೆಯಿಲ್ಲ. ಬಹು ಎಂಬುದೂ ಹಲವು ಎಂಬ ಅರ್ಥ ಹೊಂದಿದೆ. ಅಂಗದನು ಹಲವು ತಲೆ, ಯಾವಾವ ಮುಸುಡಿಗೆ ಬುದ್ಧಿಯು ಹೇಳುತಿಪ್ಪುದೊ ಎಂದಿದ್ದನು!

ಸೀತೆಯನ್ನು ಒಲಿಸಲು ಹೊರಟ ಶೃಂಗಾರರಾವಣ ಇಂದ್ರದಲ್ಲಣವೆನಿಪ ನೀಲರತ್ನಗಳಿಂದ ಇಪ್ಪತ್ತು ತೋಳು ರಂಜಿಸಲು, ಹೆಬ್ಬೆರಳುಗಳನ್ನುಳಿದು ಉಳಿದ ಬೆರಳುಗಳಿಗೆ ಮುದ್ರಿಕೆಯಿಟ್ಟನು. ತರಣಿ (ಸೂರ್ಯ) ಯಂಥ ಕುಂಡಲಗಳನ್ನು **ಮರೆಯದೆ** ಎಲ್ಲಾ ೨೦ ಕಿವಿಗಳಲ್ಲಿ ಇಟ್ಟು ಸುರುಚಿ ಮುತ್ತಿನ ಹಾರವಿಟ್ಟನು ಕೊರಳ ಬಗಿಬಗಿದು! ಎಂಬಲ್ಲಿ ಎಷ್ಟೊಂದು ಹಾರಗಳನ್ನು ಹತ್ತೂ ಕೊರಳುಗಳಲ್ಲಿ ಒತ್ತೊತ್ತೆಯಾಗಿ ಹಾಕಿದನೆಂದು ಬಣ್ಣಿಸಿದ್ದಾನೆ. "ಬಲು ಬಣ್ಣ ಮುಖಗಳಿಗೆ ಲಲನೆಯರು ಸಿಂಗಾರದಾರತಿ ಸುಳಿದರು! ಸಿಂಗಾರ ಮಾಡಿಕೊಂಡಾಗ ಆರತಿಯನ್ನು ಸುಳಿವ ಕ್ರಮ ಮದುಮಕ್ಕಳು

ಬಾಸಿಂಗ ಕಟ್ಟಿಕೊಂಡಾಗ ಮಾಡುವ ಆರತಿಯಲ್ಲಿ ಈಗಲೂ ಉಂಟು. ಮತ್ತೊಂದೆಡೆ, "ಮರುಳೆ ನೀ ಬಲು ಬಣ್ಣವಿಡೆ ಖದ್ಯೋತ (ಆಗಸದಲ್ಲಿ ಹೊಳೆವ) ರವಿ ನೀನಾದೆಯಾ ?" ಎಂದು ಲಕ್ಷ್ಮಣನು ಮೂದಲಿಸುವಲ್ಲಿ ತನ್ನ ಮುಖಗಳಿಗೆ ನಾಟಕದ ವೇಷಗಳಂತೆ ಬಣ್ಣಬರೆದುಕೊಂಡಿದ್ದನೆಂದು ಸೂಚಿಸಿ ಅಣಕಗೈದಿದ್ದಾನೆ. (೨೧: ೮, ೯, ೧೧, ೩೦) ಮಸಿ ಮುಸುಡ ನಿಗೆ ಹೊಳೆಹೊಳೆವ ಬಿಳಿಬಣ್ಣ ಬಳಿದಿರಬೇಕು! ಗಡ್ಡ ಮೀಸೆ ಗಳಿಗೂ ಬಣ್ಣಹಚ್ಚಿ ಅಲಂಕಾರ ಮಾಡಿಕೊಂಡುದನ್ನು "ಬಲು ಬಣ್ಣ" ಸೂಚಿಸುತ್ತದೆ.

ಇನ್ನೊಮ್ಮೆ, ಹನುಮನು ಯುದ್ಧದಲ್ಲಿ, ಕುರಿಯನ್ನೆಳೆ ವಂತೆ ಎಳೆದು ಅವನ ಹತ್ತು ತಲೆಗಳನ್ನೂ ಸೆಳೆದು ನೆತ್ತಿಗೆ ತುರುಬನ್ನು ಬಿಗಿದು ಕಟ್ಟಿ. ಹಿಡಿದೊತ್ತಿ ಭಂಗಮಾಡಿದ್ದುಂಟು.

ರಾವಣನ ಹತ್ತು "ಓಳಿದಲೆ"ಗಳಿಗೆ ಅಲಂಕರಣ ಮಾಡಿ ಕೊಳ್ಳಲು ಒಂದು ಕನ್ನಡಿ ಸಾಲದು. ಸಾಲುಗನ್ನಡಿಯೇ ಬೇಕು. ಅವುಗಳನ್ನು ತನ್ನ ಹತ್ತು ಕೈಗಳಿಂದ ಹಿಡಿದು, ಓಳಿ ತುರುಬು ಗಳನ್ನು ಕಟ್ಟಿ. ಉಳಿದ ಹತ್ತು ಕೈಗಳಿಂದ ಸಾಲು ಮೀಸೆಗಳನ್ನು ತಿದ್ದಿಕೊಂಡು, ತೀಡಿಕೊಂಡು, ಮದುವಣಿಗನಂತೆ ಅಲಂಕಾರ ಮಾಡಿಕೊಂಡು ಸೀತೆಯನ್ನೊಲಿಸಲು ಹೊರಟನು.

ರಾವಣನ ಹತ್ತು ಮುಖಗಳ ಗಡ್ಡಗಳನ್ನು ಲಂಕಾದಹನ ದಲ್ಲಿ ಹನುಮ ಸುಟ್ಟುದು ಆನಂದ ರಾಮಾಯಣದಲ್ಲಿ ಬಂದು ದಾದರೂ ಬಣ್ಣನೆಯಲ್ಲಿ ಕವಿ ತನ್ನದೇ ಸ್ವಾರಸ್ಯವನ್ನು ತಂದಿ ದ್ದಾನೆ. ಕತ್ತರಿ ತಿದ್ದಿದ ಗಡ್ಡಮೀಸೆಯು ಹತ್ತು ಮುಖದೊಳ

ಗೊಪ್ಪುತಿರ್ದುದು" ಎಂಬಲ್ಲಿ, ಆತನು ಗಡ್ಡ ಮೀಸೆಗಳ ಓರೆ ಕೋರೆಗಳನ್ನು ಕತ್ತಿ ತಿದ್ದಿಸಿ ಮುಖದ ಅಂದವನ್ನು ಹೆಚ್ಚಿಸಿ ಕೊಂಡಿದ್ದನು—ಈ ದಾಡೆಗಳುಳ್ಳ ಮದನ ಕಾಮ! ಬೆಂಕಿ ಯಿಂದ ಕೂಡಿದ ಬಾಲದಿಂದ ಒತ್ತಿ ಒರಸಿದಾಗ ಈ ಬಣ್ಣ ಹಚ್ಚಿದ್ದ ಗಡ್ಡ ಮೀಸೆಗಳಿಗೆ ಎಣ್ಣೆಯನ್ನೂಡಿದಂತಾಗಿ ಚನ್ನಾಗಿ ಹೊತ್ತಿ ಆರತಿಗಳಂತೆ ಬೆಳಗಿದವಂತೆ!

ರಾವಣನ ಕವಲುದಲೆಗಳ ಮಕುಟಗಳನ್ನು ಹಾರಿಸಿ, ಭಂಗಪಡಿಸಲು ರಾಮನು ಬಾಣ ಹೊಡೆದನು. ಅವನ ಮಂಡೆಗ ಳನ್ನು ಹೊಡೆಮ ಕೂದಲು ಬೋಳಿಸಿ ಮಕುಟಗಳನ್ನು ತಂದವು ಆ ಮಂತ್ರಾಸ್ತ್ರಗಳ ಬೋಳೆಯಂಬುಗಳು. ಆಗ ಬಡ (ಬೋಳು ದಲೆಯ) ಸನ್ಯಾಸಿಯಂತಿದ್ದ ರಾವಣ ಹಗರಣಗಳನ್ನು ಆಡ ಬಂದವನಂತೆ ಕಂಡನು! 'ನೋಡು ದೈತ್ಯನ ಹಲವು ಬೋಳು ಗಳೆಸೆದುವಯ್ಯಯ್ಯ!' ಅವನ ಹಲವು ಬೋಳುಗಳು ತಳತಳನೆ ಹೊಳೆದವು! ಹೆಂಗಳ್ಳನಾಗಲು ಹೋದಾಗ ಒಂದೇ ತಲೆಯ ಬೋಳು ಸನ್ಯಾಸಿಯಾಗಿದ್ದನು. ಈಗ ಘುರಗಳ್ಳನಾದಾಗ ಹತ್ತು ಬೋಳುಗಳುಳ್ಳ ಶಸ್ತ್ರಸನ್ಯಾಸಿಯಾದನು! . ದುಃಖಭರದಲ್ಲಿ ಬೀಡನ್ನು ಹೊಕ್ಕಾಗ ಗಂಡ ಸತ್ತ ಹೆಂಡತಿಯಂತೆ ದುಃಖಿಸಿದ ನಂತೆ!-ಗಂಡಸ್ತನ ಸತ್ತ ರಾವಣ. ಅತಿಕಾಯನು ರಾಮನ ಕೊಲ್ಲುವೆ ಎಂದಾಗ, ಹತ್ತು ಮುಖಗಳಲ್ಲೂ ನಗೆಯ ಸೂಸುತ ಅಪ್ಪಿ ಹರಸಿದ ದಶಮುಖ!

ಯುದ್ಧದಲ್ಲಿ ವೀರರು ಪರಸ್ಪರರನ್ನು ಮೂದಲಿಸುವಲ್ಲಿ ಕುಮಾರವ್ಯಾಸನಂತೆಯೇ ಈತನೂ ಹೆಚ್ಚಿನ ಹಾಸ್ಯದೃಷ್ಟಿ ಯನ್ನು ತೋರಿಸಿದ್ದಾನೆ.

ಸುಗ್ರೀವ-ರಾವಣ ಯುದ್ಧದಲ್ಲಿ ಸುಗ್ರೀವನು,
ಹತ್ತು ಹಿರಿವಲೆಗಳನು ತರಿದಾ
ಮೃತ್ಯುದೇವಿಗೆ ಬಿದ್ದಸಿಕ್ಕುವೆ (ಬಿದ್ದು. ಔತಣ)

ಎಂದಾಗ ರಾವಣ, ನೀನು ಕಡು ಸಾಹಸಿ ಹೌದು, ನಾವರಿಯೆವೇ? ನರಸಿಂವ ಬಾಲಿಯು ಕೊಲಿಸಿವೆ. ಗಳಪತನವಲಿ ನೀನು ಹಿರಿಯು ಬಾಯಿ ಒಡೆವಂತೆ ಚೀರಬೇಡ" ಎನ್ನುತ್ತಾನೆ.

ಬಿದ್ದು. ಎದ್ದು. ರಾವಣನ ಕೊರಳು-ಕೈಗಳನ್ನು ಬಾಲದಿಂದ ಬಿಗಿದಾಗ, ರಾವಣ 'ಬಿಡು ಬಿಡು' ಎಂದನಂತೆ. ನನಗೆ ನಿನ್ನ ಲಕ್ಷ್ಯವಿಲ್ಲ ಎಂದು ಇನ್ನೊಂದು ಅರ್ಥವಿದೆ. ಸುಗ್ರೀವ ಸೀತೆಯನ್ನು ಮೊದಲು ಬಿಡು ಅಂದಾಗ, ರಾವಣ 'ಸುಡು ಸುಡು' (ಆ ಮಾತನ್ನು) ಎನ್ನಲು,

"ಹನುಮ ಸುಟ್ಟುದು ಸಾಲದೇ ?" ಇದು ಸುಗ್ರೀವನ ಪ್ರಶ್ನೆ.

ನೀಲಕಪಿ ಬಂದು, "ಹಾರುವಗೆ ಕಾಳಗವೆ ? ಸಾರು" ಎಂದಾಗ ರಾವಣನು, "ಹಾರುವನು ನಾನು ಅಹುದು ಕಪಿಗಳ ಬೇರುಗೊಳೆಗೆಯ್ದು ವಿಜಯವ ಹಾರುವೆನು" ಎಂದನು.

ಸ್ವಾರಸ್ಯವಾದ ರಾವಣ–ಹನುಮಯುದ್ಧ ಸಂಭಾಷಣೆಯಲ್ಲಿ ರಾವಣನು ಪೊಡವಿಜೆಯು ಹೋಗಾಡಿ (ಕಳೆದುಕೊಂಡು) ರಾಘವ ಬಲು ಬೊಮ್ಮಚರಿಯುವ ಹಿಡಿವ; ಹೆಣ್ಣನ್ನು ಕೊಡುವವರಿಲ್ಲದುದರಿಂದ ನೀನು ಹೊಸ ಬೊಮ್ಮಚ್ಚರಿಯಾದೆ. ಜಡೆಗಳ ಒಡೆಯಗೂ (ಜಡೆಜೋಗಿಯಾದ ರಾಮನಿಗೂ) ನನಗೂ

ಕಚ್ಚುಟ. ಒಡೆಯನಿಗೂ ಬಂಟನಿಗೂ ಲಂಗೋಟಿ ಸರಿಯಾಯಿತು (ಲಂಗೋಟಿ ಬಲು ಒಳ್ಳೆಯದಣ್ಣ!) ಎಂದು ಮೂದಲಿಸುವುದು ತುಂಬ ಸ್ವಾರಸ್ಯವಾಗಿದೆ.

ಇಂದ್ರಜಿತ್ತು ವಿಭೀಷಣನ ಬಳಿ ಬಂದು. ಕೈಹಿಡಿದೆಬ್ಬಿಸಿ, ಮರುಳಿನ (ಭೂತದ) ಹಾಗೆ ಹಿಂಡು ಹೆಣಗಳೊಡನೆ ಇರಬೇಡ' ಎಂದಾಗ, ವಿಭೀಷಣನು ಸೀತೆಯ ಬಿಡಿಸೆಂದನು. ಆಗ ಇಂದ್ರಜಿತ್ತು ಅವಳ ಪತಿ ಸತ್ತಿದ್ದಾನೆ. ಅದರಿಂದ ಗಂಡನನ್ನು ಬಿಟ್ಟು ಮಿಂಡನನ್ನು ಸೇರಿದ ಹೆಣ್ಣೆನಂತಿದ್ದ ನಿನಗೆ ಈಗ ಗಂಡನೂ (ರಾವಣ) ಇಲ್ಲ; ಮಿಂಡನೂ ಇಲ್ಲ' ಎಂದು ಕೆಡೆನುಡಿಯುತ್ತಾನೆ. ವಿಭೀಷಣ ನನ್ನ ಪತಿ ರಾವಣನಲ್ಲ. ದೀರ್ಘಾಯು (ಪರಮಾತ್ಮ) ಎಂದಾಗ, 'ನೀನು' ಮುಪ್ಪಿನವ; ಏನೆಂದರೇನು ? ಸರಿಸರಿ "ಅರವತ್ತಕ್ಕೆ ಅರಳು ಮರುಳು" ಎಂದು ಸೂಚಿಸಿ, "ಅಪ್ಪ, ಬಿದ್ದವರಾರು ? ನೋಡು" ಎನ್ನುತ್ತಾನೆ. ಅದು ರಾಮ ಮೈಮರೆದು ಬಿದ್ದ ಸಂದರ್ಭ.

ಅಲಂಕಾರಗಳ ಮೂಲಕ ಹಾಸ್ಯವನ್ನು ಬಹಳ ಸೊಗಸಾಗಿ ತಂದುದರಿಂದ ಕಾವ್ಯದ ಆಕರ್ಷಣೆ ಬಹಳ ಹೆಚ್ಚಾಗಿದೆ.

ರಾವಣನು ಹೇಡಿಯೆಂದು ನಿಂದಿಸಿ ವಿಭೀಷಣನನು ಹೊರದಬ್ಬಿದ ಸಂದರ್ಭವನ್ನು 'ಓಡುತಿಪ್ಪರನಟ್ಟುವಂದದಿ ಮಾಡಿದನು' ಎಂದು ಹಾಸ್ಯದ ತಿರುವನ್ನು ಕೊಟ್ಟು ಹೇಳಿದ್ದಾನೆ. ಹೇಗೂ ವಿಭೀಷಣನು ಹೋಗುವವನೇ ಆಗಿದ್ದನು. ಕೋಟೆಗಳ ನಾಲ್ಕೂ ನಿಟ್ಟುಗಳಲ್ಲೂ ಕಪಿಸೈನ್ಯ ಸುತ್ತುಗಟ್ಟಿದ್ದಾಗ ಬೆದರಿದ ರಕ್ಕಸರ ಮನಃಸ್ಥಿತಿಯನ್ನು. "ಮೂಕ ಮಿಂಡನು ಕಂಡು ಸತಿ

ಯನು ಕನಲಿ ದಂತಾಯ್ತು" ಎನ್ನುವಲ್ಲಿ ಕವಿಗಳನ್ನು ಕೊಂದು ತಿನ್ನಲು ಬಗೆದಿದ್ದ ರಕ್ಕಸರ ಅಸಹಾಯಕತೆಯನ್ನು ತಾಮಸೀ ಪ್ರವೃತ್ತಿಯನ್ನು ಹೊಸಪರಿಯಿಂದ ತಿಳಿಸಿದ್ದಾನೆ.

ಹನುಮ-ನೀಲರೊಡನೆಯ ಸಮರ ಕಠಿಣವಾಗಲು ಇಂದ್ರಜಿತುವಿಗೆ "ರಂಡೆಯಾಸೆಗೆ ರಮಣಿಯುಂದವ ಕೆಡಿಸಿದಂತಾಯ್ತು." ತಾನಿರುವಾಗಲೇ ಹೆಂಡತಿ ರಂಡೆಯಂತಾದುದನ್ನು ನೋಡಬೇಕೆಂದು ಅವಳ ತಲೆಗೂದಲನ್ನು ಬೋಳಿಸಿದ ಗಂಡನಿಗಾದ ಹಾಸ್ಯಾಸ್ಪದ ಪರಿಸ್ಥಿತಿಯಾಯಿತು. ಹೆಂಡತಿಯ ತಲೆಬೋಳಿಸುವಂತೆ ಮಾಡುವೆನೆಂದು ಒಬ್ಬನು ಬಾವಿ ಹಾರಿ ಸತ್ತಿದ್ದನು-ನಿಜಜೀವನದಲ್ಲಿ!

"ಕಬ್ಬಿನ ಗಾಣದೊಳಗಾದಿಲಿಯ ತೆರನಾಯ್ತು" "ಶೂಲಕೆ ನಡೆವ ತಸ್ಕರನಂತೆ" "ಬಾಲೆ ಶೃಂಗರವಟ್ಟು ಕುರುಡನ ಮುಂದೆ ಕುಣಿದಂತೆ" "ಕಿವಿಯ ಪಡೆಯಲು ಕಣ್ಣನಿತ್ತಂತೆ" ಇವು ವಿಶಿಷ್ಟ ಹಾಸ್ಯ ಪ್ರವೃತ್ತಿಯ ಕೆಲವು ಸಾಲುಗಳು.

"ಕುರುಡಿ ಬೀಳುತ ಹುಲಿಯ ಬಾಯಲಿ ಬಿದ್ದು ಹುಲಿ ಸಾಯೆ ಕುರುಡಿಗಗ್ಗದ ಬೀರವೆಂಬೀ ಬಿರುದು ನಿನ್ನದು" ಎಂದು ಲಂಕಾದಹನ ಮಾಡಿದ್ದ ಹನುಮನ ಶೌರ್ಯವನ್ನು ಮೂದಲಿಸುತ್ತಾನೆ ರಾವಣ.

"ಅಳತೆಯ ಕೋಲೆ ಬಾಲವು ಸೇತು ಬಂಧನಕೆ" ಎಂಬಲ್ಲಿ ತಮ್ಮ ಬಾಲಗಳನ್ನೇ ಅಳತೆಯ ಕೋಲುಗಳಂತೆ ಕಪಿಗಳು ಬಳಸುತ್ತಿದ್ದ ಚಿತ್ರವನ್ನು ನೀಡಿ ಸ್ವಾರಸ್ಯವನ್ನು ಹೆಚ್ಚಿಸಿದ್ದಾನೆ.

ಅಂಗದನು ಬಂದಾಗ ರಾವಣನು ಸುಗ್ರೀವನು ವಾಲಿಯನ್ನು ಕೊಲ್ಲಿಸಿದಂತೆ ನಿನ್ನನ್ನೂ ಕೊಲ್ಲಿಸಬಹುದು ಎಂದು ಭೇದವನ್ನು ಬಿತ್ತಿ "ಬಣ್ಣದಾಸೆಗೆ ಬದುಕು ಮಾರಿದ ಗಣಿಕೆಯಂತ ಹುದು' ಸೀರೆಯ ಆಸೆಗಾಗಿ ಬದುಕನ್ನು, ಪ್ರಾಣವನ್ನು ಕಳಕೊಂಡ ಸೂಳೆಯಂತೆ ನೀನು ಸಾಯಬಹುದು ಎಂದು ಬೆದರಿಸಿದ್ದಾನೆ.

ಯುದ್ಧದಲ್ಲಿ ಪುನಃ ಲಂಕೆಯನ್ನು ಕಪಿಗಳು ಸುಟ್ಟಾಗ, ಹಿಂದೆ ಹನುಮನು ಕೊಳ್ಳಿಬಾಲದಿ ಸುಟ್ಟ, ಇದು ಮರ(ರು) ಗೊಳ್ಳಿಯಾಯಿತು, ಎಂಬಲ್ಲಿ ಹೆಣಗಳನ್ನು ಸುಟ್ಟಲ್ಲಿ ಮರುಗೊಳ್ಳಿ ಹಾಕಿ ಬರುವ ಸಂಪ್ರದಾಯದ ದೇಸಿ ಶಬ್ದದಲ್ಲಿ 'ಮರಗೊಳ್ಳಿ ಎಂಬಲ್ಲಿ ಶ್ಲೇಷೆಯೂ ಸೇರಿ ಕವಿಯೇ ಹೇಳಿದ "ಕೊಳ್ಳಿ ಗಾಳಗ"ದ ಸ್ವಾರಸ್ಯವನ್ನು ಹೆಚ್ಚಿಸುತ್ತದೆ.

ಅಂಗದನು ರಾಮನ ರಾಯಭಾರಿಯಾಗಿ ರಾವಣಸಭೆಗೆ ಹೋದ ಸನ್ನಿವೇಶದಲ್ಲಿ ವಾಲ್ಮೀಕಿರಾಮಾಯಣದಲ್ಲಿ ಅಂಗದನು ಮುಖ್ಯವಾಗಿ ರಾಮನು ರಾವಣನಿಗೆ ಕಳಿಸಿದ ಸಂದೇಶವನ್ನೇ ಹೇಳಿದುದುಂಟು. 'ತೊರವೆ ರಾಮಾಯಣ'ದಲ್ಲಿ ಅಂಗದನು ರಾವಣ ಹಿಂದೆ ಭಂಗಪಟ್ಟಿದ್ದ ಕೆಲವು ಸನ್ನಿವೇಶಗಳನ್ನು ನೆನಪಿಸಿ, ಹತ್ತು ತಲೆಗಳನ್ನೂ ಮೈಯನ್ನೂ ಮರೆಸಿ ಸೀತೆಯನ್ನೂ ಕದ್ದೊಯ್ದ ಬಂಟನಲ್ಲವೇ? ಎಂದೆಲ್ಲ ಹೇಳಿ ಛೇಡಿಸಿದುದುಂಟು. (ಯುದ್ಧಕಾಂಡ ಸಂ. ೧೦).

ಆದರೆ, ಬತ್ತಲೇಶ್ವರ ರಾಮಾಯಣದ ಈ ಸನ್ನಿವೇಶದ ಹಾಸ್ಯ ನೂತನ ಪರಿಯದಾಗಿ ತುಂಬಾ ಸೊಗಸಾಗಿದೆ. ರಾವಣನು 'ನೀನೇಕೆ ಬಂದೆ ?' ಎಂದು ಕೇಳಿದಾಗ 'ರಾಮನ

ಲದಲ್ಲಿ ಒಂದು ವಾದ ಹುಟ್ಟಿತ್ತು. ಖಳನ ಕೊರಳೊಂದರಲಿ
ಲೆ ಹತ್ತು ಎಂದು ಕೆಲವರು ಹೇಳಿದರು. ಕೆಲವರು ಅಲ್ಲ;
ತ್ತು ಕೊರಳುಗಳಿಗೆ ಒಂದೊಂದು ತಲೆಯಂತೆ" ಎಂದು ಹೇಳಿ
ಲವನ್ನು ಹೊತ್ತು, ಪಣವನ್ನೊಡ್ಡಿ, ಸತ್ಯವನ್ನರಿಯಲು
ನ್ನನ್ನು ಕಳಿಸಿದರು ಎಂದು ಹೇಳಿದುದು ಕುಮಾರವ್ಯಾಸನ
ರೊಂದು ಸಂದರ್ಭದಲ್ಲಿ ಪಣವನ್ನಿಟ್ಟು ಒಡ್ಡ ಕಟ್ಟಿದುದರ
ಸೂಚನೆ ಹೊಂದಿಯೂ ನೂತನವಾಗಿದೆ.

"ಲೋಕದಲ್ಲಿ ಎಷ್ಟು ಜನ ರಾವಣರಿದ್ದಾರೆ ? ನನಗೆ
ಳಿಯದು ಹೇಳು" ಎಂದು ಲೇವಡಿ ಮಾಡುವ ಶೈಲಿ ತುಂಬಾ
ಸ್ವಾರಸ್ಯವಾಗಿದೆ. ಹತ್ತೆಂಟು ಬಿನುಗು ರಾವಣರ ಸುದ್ದಿಯನ್ನು
ಳಿದ್ದೇನೆ. ದೈವಜ್ಞರನನ್ನು ಕೆಣಕಿ ಸೋತು ಚಿನ್ನದ ಸತ್ತಿಗೆ
ುತ್ತು ಶರಣೆಂದಾಗ, ಅಜಪಾಲನು ಕಾದ ರಾವಣನೊಬ್ಬ.
ನ್ನ ತಂದೆ ಮೀವಾಗ ಸೆಣಸಿದೊಬ್ಬನನ್ನು ತಂದೆ ಕಂಕುಳಲ್ಲಿ
ವಚಿ ತಂದು ತೊಟ್ಟಿಲಿಗೆ ಕಟ್ಟಿದಾಗ, ಒದರಿದಾಗ ನನ್ನ
ಯುಗುರಿನಿಂದ ನಾನು ಹೊಡೆಯಲು ಕೆನ್ನೆಗಳು ಕಲೆಯಾದ
ಾವಣ ನೀನಲ್ಲವೇ ?

ಕಾರ್ತವೀರ್ಯಾನ ಹಿಂಡುದೋಳಲಿ ಸಿಕ್ಕಿ ಗಂಡುಗೆಟ್ಟಾಗ
ೊಮ್ಮನು ಒಬ್ಬ ರಾವಣನನ್ನು ಬಿಡಿಸಿದನು. ಖಂಡಪರಶು
ನ (ಶಿವನ) ಬೆಟ್ಟದ ಅಡಿಯಲ್ಲಿ ಮಂಡೆ ಮತ್ತು ಕೈಗಳು ಸಿಕ್ಕಿ
ದರಲು ಕಂಡು ಆತ ಕರುಣದಿ ಕಾದ ರಾವಣನು ನೀನಲ್ಲವೇ ?

ಶಿವಧನುಸ್ಸಿನ ಎಡೆಯಲ್ಲಿ ಹಿಂದೆ ಹೊರಳಿದನೊಬ್ಬ
ವಣ. ಖಗನ (ಸಂಪಾತಿಯ) ಎಡಗಾಲಿನಲ್ಲಿ ಒಬ್ಬ ರಾವಣ

ನುಸುಳಿದನು. ಬಲಿಯು ಸೆರೆಯಲ್ಲಿದ್ದಾಗ ಒಂದೊಂದು ರಾತ್ರಿಗೆ ಒಂದೊಂದು ಸಲ ಗೊಂದಣದ ತೊತ್ತಿಯರು ಒಬ್ಬ ರಾವಣನನ್ನು ಕುಣಿಸಿದರು, ಇದು ತೊರವೆ ರಾಮಾಯಣದಲ್ಲಿಗಿಂತಲೂ ಹೆಚ್ಚು ಸೊಗಸಾಗಿದೆ.

ಕಪಿಯು ಲಂಕೆಯನ್ನು ಸುಟ್ಟಿದ್ದಲ್ಲದೆ, ಗಡ್ಡ ಮೀಸೆ ಸಹ ಕರಿಗಟ್ಟುವ ಹಾಗೆ ಸುಟ್ಟಿತೆಂಬರು. ಆದರೆ, ನಿನ್ನ ಮೋರೆಯಲ್ಲಿ ಸುಟ್ಟ ಮೀಸೆ ಕಾಣುತ್ತಿಲ್ಲವಲ್ಲ. (ಈಗ ಹೊಸದಾಗಿ ಚಿಗಿತಿವೆ) ಮುಂತಾಗಿ ಹೇಳುವಲ್ಲಿ ವಿಶೇಷವಾಗಿ ಹೊಸ ಸ್ವಾರಸ್ಯ ಬಂದಿದೆ.

ಕುಂಭಕರ್ಣನನ್ನು ಗಾಢನಿದ್ರೆಯಿಂದ ಎಬ್ಬಿಸುವ ಪರಿಶ್ರಮದ ವಿವರ ವರ್ಣನೆಯಲ್ಲಿ ತೊರವೆರಾಮಾಯಣಕ್ಕೂ ಬತ್ತಲೇಶ್ವರರಾಮಾಯಣಕ್ಕೂ ಹೋಲಿಕೆ ಕಾಣುತ್ತದೆ. (ತೊ.ರಾ.೨೬) ಕಣ್ಣಲಿ ಸುಣ್ಣ ಸಾಸಿವೆಯ ಹಾಯ್ಕಿದರು, ಹೆಡಗೆ ಹೆಡಗೆಯಲರೆದ ಮೆಣಸಿನ ಪುಡಿಯ ಹೊಯ್ದರು ಮೂಗಿನಲಿ ಕಾವಡಲಿಗಳ (ಕಾದ ಕೆಸರ) ಚೆಲ್ಲಿದರು ಚೆಲ್ಲಣದಡಿಯಲಿ ಎಂಬ ವಿವರದಂತೆ ಇಲ್ಲಿ ಹುರಿದ ಮರಳನು ಮೇಲೆ ಚೆಲ್ಲಿದರೆಂದೂ ಸಾಸಿವೆ ರಸ-ಉಪ್ಪು-ಮೆಣಸುಗಳನ್ನು ಮೂಗಿನ ಹೊದರಲ್ಲಿ ತುಂಬಿದರೆಂದೂ ನಿದ್ರೆಯಲ್ಲೇ ಕುಂಭಕರ್ಣ ಸೀತಾಗ, ತರಗೆಲೆಯಂತೆ ಗಿರಿಯ ತೋರದ (ಗಡುತರ) ಭಟರು ಹಾರಿದರು ಎಂದೂ ವರ್ಣನೆಯಿದೆ. ಕುಂಭಕರ್ಣ ಉಸಿರು ತಕ್ಕೊಳ್ಳುವಾಗ ಅವನ ಮೂಗಿನಲ್ಲಿ ಹೊಕ್ಕು ಉಸಿರು ಬಿಟ್ಟಾಗ ಮನೆಯ ತೊಲೆ ತಾಗುವಂತೆ ಮೇಲೆ ಏರಿದನಂತೆ ಹನುಮ!

ಅವನ ವದನದ ಆಕಳಿಕೆಯಿಂದ ಸುಂಟರಗಾಳಿ ಲಂಕೆಯ

ಲದಲ್ಲೆಲ್ಲ ಬೀಸಿತು ಎಂಬ ಸೊಗಸಾದ ಕಲ್ಪನೆ ತೊರವೆ
ಮಾಯಣದಲ್ಲಿ ವಿಶಿಷ್ಟವಾಗಿದೆ. ಅಲ್ಲದೆ, ಮೂಗಿನ ಪೊದರಿ
ಕಾಡೆಮ್ಮೆ ಕಾಡಕೋಣ ಇತ್ಯಾದಿ ಪ್ರಾಣಿಗಳನ್ನು ಹುಗಿಸಿದ
ು ಅತ್ಯುಕ್ತಿಯೂ ಅಲ್ಲಿದೆ.

ಎಚ್ಚೆತ್ತ ಕುಂಭಕರ್ಣ ಹಸಿವಿನ ವಿಪರೀತ ತುಡಿತದಿಂದ
ಂಖ್ಯೆ ಪ್ರಾಣಿಗಳನ್ನು ತಿಂದು, ಮದ್ಯದ ಹಲವು ಕೊಡ
ನ್ನು ಖಾಲಿಮಾಡಿದನು. ಅನಂತರ ಶ್ರೀಗಂಧವನ್ನೂ ಸುಣ್ಣದ
ದ್ದೆ-ಎಲೆ-ಅಡಕೆಗಳ ಪೇರುಗಳನ್ನೂ ಅವನ ಬಾಯಲ್ಲಿ ಒಟ್ಟಿ
ನು ಬತ್ತಲೇಶ್ವರ ರಾಮಾಯಣದಲ್ಲಿ ವಿಶಿಷ್ಟವಾಗಿದೆ. ತೊರ
ಾಮಾಯಣದಲ್ಲಿ ಅವನ ಹಸಿವು ಹಿಂಗದಿರಲು ಸೆರೆಯು
ಕಳ್ಳರನ್ನೂ(ಸತ್ತ) ಹೆಣಗಳನ್ನೂ ಅವನ ತಿನಿಸಿಗೆ ಸುರುಗಿ
ನು ವಿಶೇಷ ವರ್ಣನೆ.

೭. ಅಲಂಕಾರಗಳ ಔಚಿತ್ಯ

ಕವಿಯು ನೂರಾರು ಅಲಂಕಾರಗಳನ್ನೂ ಶೈಲಿಯನ್ನೂ
ರನೆಗಳನ್ನೂ ಹಿಂದಣ ಕವಿಗಳಿಂದ, ಮುಖ್ಯವಾಗಿ ಕುಮಾರ
ಸನಿಂದ ಪಡೆದಿರುವನಾದರೂ ಹೊಸ ಹೊಸ ಕಲ್ಪನೆಗಳಿಂದ
ಪ್ರತಿಭೆಯ ಚಿತ್ರಣಗಳನ್ನು ಕೊಟ್ಟುದು ಸಹ ಸಾಕಷ್ಟಿದೆ.
ಮ-ರಾವಣ ಯುದ್ಧದಲ್ಲಿ, "ಅಜಾಂಡ (ಬ್ರಹ್ಮಾಂಡ),
ಕುಮ ಪಂಕದಂತಾಯ್ತು" ಎಂದು ರಕ್ತದಿಂದ ತುಂಬಿ
ಯಿತು ಎಂದು ಸೂಚಿಸಿದುದೂ ಪೂರ್ತಿ ಹೊಸದಲ್ಲ

ದಿದ್ದರೂ ರಕ್ತದ ಅರವಟ್ಟಿಗೆಯು ಕಲ್ಪನೆ ಸಹ ಕವಿಗೆ ಹೆಮ್ಮೆಯನ್ನು ತರುವ ರೂಪಕವಾಗಿದೆ. **ಜಲದ** ಎಂದು ರಕ್ತವನ್ನು ಬಣ್ಣಿಸುವ ವಿಶೇಷಣ ತುಂಬ ಸಾರ್ಥಕವಾದ ಶಬ್ದ.

ಸಂಧ್ಯಾಕಾಲದ ಮಬ್ಬನ್ನು ಬಣ್ಣಿಸುವ ಪ್ರಕೃತಿ ವರ್ಣನೆಯಲ್ಲಿನ "ಗಗನವು ಸಿರಿಸವೆದ ಮನೆಯಾಯ್ತು" ಎಂಬ ರೂಪಕದಿಂದ ಬಡತನದಿಂದ ಅಂದಗೇಡಿಯಾದ ಮನೆಯ ಚಿತ್ರಣ ಕೊಡುವಲ್ಲಿ ನೂತನತೆಯೇ ಇದೆ.

ರಾವಣನ ತುರುಬುಗಳನ್ನು ಹಿಡಿದು ಹನುಮ ಎಳೆದಾಗ "ಅಸುರನೆದೆಯಲಿ ಢಕ್ಕೆ ಗುಟ್ಟಿತು" ಎಂದು ಅವನ ಮರಣ ಭೀತಿಯನ್ನು ಬಣ್ಣಿಸಿದ ಪ್ರತಿಭೆ ಅಸಾಧಾರಣವಾದುದು-ಢಕ್ಕೆ ಶಿವನು (ರುದ್ರನು) ಹಾಗೂ ಆತನ ಭೂತಗಣದವರು ಬಡಿವ ವಾದ್ಯ. ಎದೆ ಡವಡವಗುಟ್ಟಿತು ಎಂಬುದಕ್ಕಿಂತಲೂ ಹೆಚ್ಚು ಜೋರಾದ, ಶಕ್ತಿಶಾಲಿಯಾದ ಬಣ್ಣನೆಯಿದು.

ಮಂಡೋದರಿಯು, ಧೀರನಂತೆ ಹೋರಾಡಿ ತಾರದೇ ಮುಂಡೆಯರ **ಮುಖ ಸಿರಿಯು** ಹೋಲಿದು ಕದ್ದುಕೊಂಡು ತಂದುದು ಭಂಗವಲ್ಲವೆ ? ಎಂದು ಕೇಳುವಲ್ಲಿನ ಅಣಕದ ಪರಿ ಹೊಸದಾಗಿದೆ.

ದೈವಹೀನರಿಗೆ ವಿಪತ್ತುಗಳು ಹೇಗೆ ಅನಿರೀಕ್ಷಿತವಾಗಿ ಬರುತ್ತವೆ ಎಂಬುದನ್ನು ಮಾರಿ ಮುಖದೈತ್ಯನ ಮಾತಿನಲ್ಲಿ "ಮತ್ತೆ ನೆಗಹಿದ ಹುತ್ತು ಪನ್ನಗವಾಗಿ ಹರಿವುದು" ಎಂದು ಹೇಳಿರುವಲ್ಲಿ, ಹುತ್ತಿನಲ್ಲಿ ಹಾವು ಹೋಗಿರುವುದು ಸಂಭವ

ರೀಯುವಿದ್ದರೂ. ನೆಗಹಿದ ಸರ್ಪವಿಲ್ಲದ ಹುತ್ತೇ ಸರ್ಪವಾಗಿ ಹರಿಯುತ್ತದೆ ಎಂಬ ದೃಷ್ಟಾಂತ ಕೊಟ್ಟುದರಲ್ಲಿ ಪನ್ನಗ (ಕಾಲಿ ನಿಂದ ಚಲಿಸದಿದ್ದರೂ ಚಲಿಸುವ) ಶಬ್ದವು ಸಮಂಜಸವಾಗಿದ್ದು ಕಲ್ಪನೆ ಹೊಸದೂ ಆಗಿದೆ.

'ದಧಿಮುಖನುರವನೋದಬಿಂದ ಜಾಳಾಂದರವ ಮಾಡಿ ದನು' ಎಂಬ ರೂಪಕ ಹೊಚ್ಚ ಹೊಸತು. ರಾಮನು ವರುಣನ ಮೇಲೆ ತೊಟ್ಟ ಪಾವಕಾಸ್ತ್ರ ಸಂದರ್ಭದಲ್ಲಿ 'ತರಣಿಯುಲಿ ಬಲು ಸಾಣೆಯಾಯಿತೊ' ಎಂಬ ಕಲ್ಪನೆ ಅದ್ಭುತವಾದದ್ದು.

ಅಂಗದನು ಶಕ್ವರಿ ನೋವಂತೆ ಹೊಡೆಯುಲು ಹಲ್ಲು ಕಿಲ್ಲಿತು.

ಆರಿದನು (ಕೂಗಿದನು) ವೀರರಕ್ಕಸ
ಮಾರಿ ಧೈರ್ಯದಲೆದ್ದು ಮೆಲ್ಲನೆ
ಸೋರುತಿಹ ಲೋಹಿತ (ರಕ್ತ)ವನೊರಸುತ
ಕಂಗಳೆರಡರಲಿ॥
ಕಾರಿದನು ಕಿಡಿಗಳನು

ಎಂಬಲ್ಲಿ ರಕ್ಕಸನ ರೊಚ್ಚಿನ ಭಯಂಕರ ಚಿತ್ರಣವಿದೆ.

ಮಹಾಕವಿಯ ಶೈಲಿಯ ಮಹಿಮಾತಿಶಯವನ್ನು ಯುದ್ಧ ವರ್ಣನೆಗಳೂ ಸಮರ್ಥಿಸುತ್ತವೆ. ಉದಾ :

ಪೊಡವಿಪತಿಗಳ ಬೇರುಗೊಲೆಯನು ಕೊಂಡ ಮಹಿಪ ಯು ಎಂದು ಪರಶುರಾಮನ ಬಣ್ಣನೆ ಮಾಡುವಲ್ಲಿ ಕಿರಿದರಲ್ಲಿ ರಿ ಅರ್ಥವಿದೆ.

ಕರುಳು ಹೊರಬಿದ್ದು ರಾವಣ ಮೈಮರೆದು ಬಿದ್ದಾಗ
ಹನುಮನು "ಕೆಟ್ಟೆ *ಹನುಮಾಯಣವಿದಾಯಿತು" ಎಂಬ
ಕೃತಕತೆಯ ಛಾಯೆಯಿದ್ದರೂ ಪ್ರತಿಭಾಸ್ಪರ್ಶವಿದೆ.

'ಸರಳ ಮಳೆಯಲಿ ತೋದನದ್ದಿದನವುವ ಮುಳ
ಸಿದ"ಎಂಬಲ್ಲಿ ಶರವರ್ಷದ ಕಲ್ಪನೆಯನ್ನೇ ವಿಸ್ತರಿಸಿ ಬಣ್ಣಿಸಿದ
ಸೊಗಸಾಗಿದೆ.

ರಕ್ಕಸರಾಯ ಭೈರವನಾದನಹಹಾ ಕೈಯ ಮುಚ್ಚಿದ
(೨೨:೫೧) ಎಂಬಲ್ಲಿ ಭೈರವ ಎಂಬುದನ್ನು ಬತ್ತಲೆ ಎ
ಅರ್ಥದಲ್ಲಿ ಈ ಹಿಂದೆ ಈತನ ಹೊರತೂ ಮತ್ತಾವ ಕವಿಯ
ಬಳಸಿದಂತೆ ಕಂಡುಬಂದಿಲ್ಲ. ಯಾಣದ ಭೈರವೇಶ್ವರನು ಶಿ
ರೂಪದಲ್ಲಿ (ಗಿಡಮರಸಹ ಬೆಳೆಯದೆ) ಬತ್ತಲೆಯಾಗಿ ನಿಂತಿ
ರಿಂದಲೂ ಈ ಕಲ್ಪನೆ ಬಂದಿದ್ದರಬಹುದು.

'ಅಮಮ ಖಳಪಡೆಯಡಗು(ಮಾಂಸ) ಮಾರಿಯರಂ
ಗಳಲಿ ಮಾರಿ ಸವೆಯದಿರೆ'ಎಂಬಲ್ಲಿ ಯುದ್ಧದಲ್ಲಿ ಕಡಿಖಂಡವ
ಬಿದ್ದ ಅಸಂಖ್ಯರಕ್ಕಸರ ಮತ್ತು ಕಪಿಗಳ ಸಂಹಾರವ
ಸೂಚಿಸುವಲ್ಲಿ ಉತ್ಪ್ರೇಕ್ಷೆಯ ಅರ್ಥವುಳ್ಳ ಅಲಂಕಾರಕಂಡ
ಈ ಕವಿಗೆ ಇದು ಸ್ವಭಾವೋಕ್ತಿಯಂತಿದೆ.

ಹಲವು ರೌದ್ರಮುಖರನ್ನು ತಲೆಯನರಿದು ನಿ
ಯೆತ್ತುವವರನ್ನು ಬಲಿದು ಶೂಲವನೇರಿ ಕೂಗುವವ
ಒಲಿದು, ಕೆಂಡದ ನೀರ ಮೀವವರನ್ನು ಇಂದ್ರಾರಿ ಕಂಡ
ಬಣ್ಣನೆಯಲ್ಲೂ ಇದು ಕಂಡಿದೆ.

ಮಕರಾಕ್ಷನು ಬಾಣಗಳ ಮಳೆ ಕರೆದಾಗ ಬಿಸಿಲು ಕರಿದೋ ಳಿದೋ ಹೇಳೆನೆ. ಎಂಬ ಬಣ್ಣನೆ ಅತಿನೂತನವಾಗಿದ್ದು ಸ್ವಾರಸ್ಯವಾಗಿದೆ.

ರಾಗಿ ಬೆಳೆಯನ್ನು ಗುಡ್ಡದ ಓರೆಯಲ್ಲಿ ಬೆಳೆವ "ಕುಮ್ರಿ" ರೇಸಾಯ ನಮ್ಮ ಜಿಲ್ಲೆಯ ಶಬ್ದವಾಗಿದ್ದು ಇದನ್ನು ಕವಿ ಹಲ ಡೆ ಬಳಸಿದ್ದಾನೆ. ಶತ್ರುಗಳನ್ನು ಸವರುವಲ್ಲಿ ಕುಮ್ರಿಗಡಿತ ಂಬ ಶಬ್ದ ಬಳಕೆಯಾಗಿದೆ.

ಸೀತೆಯನ್ನು ರಾವಣ ಬಂಧಿಸಿ ಇಡುವುದನ್ನು ಬಾಡ ಬಾಗ್ನಿಯನರಗಿನರಮನೆಯೊಳಗೆ ಬಂಧಿಸುವ ಕೇಡುಗರನೇನೆಂಬೆ ಂಬಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಬಾಡಬಾಗ್ನಿ ಬಳಕೆ ಯಾಗಿದೆ. ನೀರಿನಲ್ಲೂ ನಾಶವಾಗದ ಬಾಡಬಾಗ್ನಿ ಅರಗಿನರ ಮನೆಯಲ್ಲಿ ಏನನ್ನು ಮಾಡಬಹುದು ಎಂಬ ಸೂಚನೆಯಿಲ್ಲಿದೆ.

ನೆಲಂ ಬೆಸಲೆಯಾದವೋಲ್ ಎಂದು ನಾಗಚಂದ್ರನು ಅಸಂಖ್ಯ ಬೇಡರ ಪಡೆಯನ್ನು ಬಣ್ಣಿಸಿದ್ದನು. ಇಲ್ಲಿ ಮಾರಿ ಬೆಸನಾದಂತೆ ನಾಲುಕು ದೆಸೆಯನಾವರಿಸಿ ಭೂರಿ ದನುಜರು ಂದು ಬಣ್ಣಿಸಿದುದು ರಾಕ್ಷಸರ ವಿಷಯದಲ್ಲಿ ತುಂಬಾ ಉಚಿತ ವಾಗಿದೆ.

ಮೂಕೊರತಿ ಶೂರ್ಪನಖಿ ರಾವಣನೊಡನೆ "ಮೂಗನು ಂಚಕಾರವನಿತ್ತೆ ಸತಿಗೆ'. ಸೀತೆಯನ್ನು ನೀನು ಕೊಳ್ಳಲು ನಾನು ಮೂಗನ್ನು ಸಂಚಕಾರವಿತ್ತು ಬಂದಿದ್ದೇನೆ ಎಂದುದು ಹಾಸ್ಯ ರಕವಾಗಿಯೂ ಇದ್ದು ಸಂಚಕಾರಪದ್ಧತಿಯ ಸೂಚಕವಾಗಿದೆ.

ಕರೆಯಲು ಅಂಗೈತಳಕೆ ತರಣಿ ಬರುವನೇ ? ಚಿಟುಕಿಸಿ (ಚಿಟಿಕೆ ಹಾಕಿ) ಕರೆಯಲು ವನಕೇಸರಿ ಬರುವುದೇ ? (ತರಬೇತಿ ಗೊಳಿಸಿದ ಸರ್ಕಸ್ ಸಿಂಹ ಬಂದೀತು) ಕಾಡಿನ ಆನೆಯನ್ನು ತುರಿಸಿ ಕೈಗಣ್ಣಿಯಲ್ಲಿ ಕಟ್ಟಲು ಬರುವುದೇ ? ಮುಂತಾಗಿ ಪ್ರತಿ ವಸ್ತೂಪಮಾಲಂಕಾರದ ಮೂಲಕ ಕೋಡಿನ ಮುನಿ (ಋಷ್ಯ ಶೃಂಗ)ಯನ್ನು ಕರೆದರೆ ಸುಲಭವಾಗಿ ಬರಲಿಕ್ಕಿಲ್ಲವೆಂಬ ರೀತಿ ಯೆಲ್ಲ ನವೀನವಾಗಿದೆ.

"ಅವನೊಡನೆ ಧನು ನುಡಿವವೋಲ್ ಹೂಂಕಾರ ಹುಟ್ಟಿ ದುದು ಎಂಬ ಸಹೋಕ್ತಿಯು ಧನುಸ್ಸು ಸಂಪೂರ್ಣವಾಗಿ ರಾಮನ ಹಿಡಿತದಲ್ಲಿತ್ತು ಎಂಬುದನ್ನು ಸೂಚಿಸಿದೆ.

ರಕ್ಕಸಿಯರ ನಡುವೆ ದುಃಖಿಸುತ್ತ ಅಳುವ ಸೀತೆಯನ್ನು "ಕಾಳುಗಿಚ್ಚಿನ ನಡುವೆ ಸಿಕ್ಕಿದ್ದಾಲಿಕಲ್ಲಿನ ಪೋಲು" ಎಂದುದು ಸಮಂಜಸ ಹೋಲಿಕೆ. ಅವಳ ಕಣ್ಣೀರಿನ ಪ್ರವಾಹವು ಸೂಚಿತ ವಾಗಿದೆ.

ಗಾಯ ತುಂಬಿ ಬಿದ್ದಿದ್ದ ರಾಮನನ್ನು ಸೀತೆ ಶೋಕದಿಂದ ಬಣ್ಣಿಸುವಾಗ "ಹಸಿಯ ಮಣ್ಣಿನ ರೂಪ ಬೇಸಗೆ ಬಿಸಿಲೊಳೊ ಡೆದುತಿರಲು" ಎಂದುದು ತಕ್ಕಮಟ್ಟಿಗೆ ಚನ್ನಾಗಿದೆ.(೨೯-೧೭)

೮. ವರ್ಣನೆಗಳು

ವರ್ಣನೆಯ ಮಿತಿಯಲ್ಲಿಯೂ ಕುಮಾರವ್ಯಾಸನ ಪ್ರಭಾವವನ್ನು ಕಾಣಬಹುದು. ಪ್ರಕೃತಿ ವರ್ಣನೆಗಳು ಅಲ್ಲಿಗಿಂತ ಇಲ್ಲಿ ಕಡಿಮೆ. ರಾತ್ರಿವರ್ಣನೆ 'ತರಣಿ ತಮಸೆಯಲಸ್ತಮಾನಕೆ ಸರಿಯೆ.' ಇನ್ನೊಂದೆಡೆ ಸಾಂಪ್ರದಾಯಿಕವಾದ ಚಕ್ರಾಂಕ ಅಗಲುವುದು ಪದ್ಮಿನಿ ಮೊಗವ ಮುಚ್ಚುವುದು ಇತ್ಯಾದಿಯುಂಟು. ಸೂರ್ಯನ ಕಿರಣ ಕೆಂಪಳಿದಬ್ಬವಾಯ್ತೆನೆ ತಾರೆಯುದಿಸಿದುವು ಸಂಬಂಧ ಉತ್ಪ್ರೇಕ್ಷೆ ಅಪೂರ್ವವಾಗಿ ಕಾಣುತ್ತದೆ.

ಸೂರ್ಯೋದಯದಲ್ಲಿ, ಕಿರಣಗಳಿಂದ ಕತ್ತಲೆಯ ಕೆತ್ತಿದ ಭಾನು ಬಿಸಿಲನು. ಬಿತ್ತುತಿರ್ದ ಕಪಿಯ ಧೈರ್ಯವ ನೋಡಲ್ಕೆ ಬಂದ. ಇನ್ನೊಮ್ಮೆ ರಾಮಗೆ ಬಪ್ಪ ಬೇಸರನ್ನು ಕಾಣಲಾರದೆ ಕುಮ್ಮಳಿಸುತ್ತ ಪಶ್ಚಿಮಾಬ್ಧಿಯಲಿ ಬಿದ್ದ.

ವಾಲ್ಮೀಕಿರಾಮಾಯಣದ ಅದ್ಭುತವಾದ ರಾಮವಿರಹವನ್ನು ವ್ಯಕ್ತಮಾಡುವ ಮಳೆಗಾಲದ ವಿಸ್ತೃತ ವರ್ಣನೆಯ ಮುಂದೆ ಇಲ್ಲಿಯ ವರ್ಷಾಕಾಲವರ್ಣನೆ ಎರಡು ಅರ್ಧ ಪದ್ಯಗಳಲ್ಲಿ ಮುಗಿದುದನ್ನು ನೋಡಿ(೮ನೇ ಸಂಧಿ) ಕವಿಯ ವರ್ಣನಾ ಸಂಯಮ ಆಶ್ಚರ್ಯವನ್ನುಂಟುಮಾಡುತ್ತದೆ. ಅರಸನ ವಿರಹ ಶೋಕದ ಕಂಬನಿಗಳಂತೆ ತುಂತುರ್ವನಿ. ಆ ತುಂತುರ್ವನಿಗೂ ಶೀತಗಾಳಿಗೂ ನಡುಗುತ್ತ ಹಲ್ಲುಗಿರಿವ ಕಪಿಗಳನ್ನು ಕಂಡರಾಮ. ಮಳೆಯ ಮುಗಿಲಿಗೆ ವಾಲಿ ಸಹ ಸೆಡೆವ ಎಂಬಲ್ಲಿಗೆ ಈ ವರ್ಣನೆ ಮುಗಿದೇಹೋಗಿದೆ.

ಶರದೃತು ವರ್ಣನೆಯಲ್ಲಿ ತೊರೆಗಳು ಭರದಿಂದ ಇಳಿದು ಯೋಗಿಯ ಭರವನ್ನು ಹೋಲಿತು. ಮುಂದೆ ಗಿಳಿನವಿಲು ಸುಸ್ವರದಲಿ ದನಿದೋರಿದವು. ಬಕಗಳು ಹಾರಿಬಂದವು. ಚಂದ್ರನ ಕಳೆಗಳೆಗಳೇರಿದವು ಇಷ್ಟೇ ಇದೆ.

ಲಂಕೆಯ ಉಪವನ ವರ್ಣನೆಯಲ್ಲಿ ಚಂದ್ರನು ಪೋಷಿಸಿದ ಕೃತ್ರಿಮ ಮರಗಳ ನಡುವೆ ಪಂಚಬಾಣನ ಹೂದೋಟದಲ್ಲಿ ಫಲಭರದಿಂದ ತುಂಬಿದ ಮಾಮರದ ಕೊಂಬೆಯನ್ನು ಹನುಮ ಏರಿದುದಿದೆ.

ರಾತ್ರಿಯ ಬಣ್ಣನೆಯಲ್ಲಿ ಮಹಿತಳಾನಗರಿ ಕೊಳದ ಪಂಕಜನಾಳದಲ್ಲಿ ಹೋದುದು ಎಂಬಲ್ಲಿ ಸೂಕ್ಷ್ಮತೆಯಲ್ಲೇ ಚಮತ್ಕಾರವಿದೆ.

ಇಂದ್ರಾರಿಯ ರಾತ್ರಿಕಾಳಗದ ಕತ್ತಲೆಯ ವರ್ಣನೆಯಲ್ಲಿ ಇರುಳು ಮುಪ್ಪುರಿಗೊಂಡುದೋ ಕಾರಿರುಳ ತಿರುಳಂಕುರಿಸಿತೋ ಉರಗವಿಷವು ಪ್ರಾಯಧರಿಸಿ ಹರಿಯಿತೋ ಹರಕೊರಳ ಗರಳವ ಧರೆಗೆ ತೊಡೆದನೋ ಎನಲು ಕತ್ತಲೆ ಸುರಿಗ ಕಾಡಿಗೆ ಸೋನೆಯಾಯಿತು ಎಂಬ ಉತ್ಪ್ರೇಕ್ಷೆಗಳ ಮಾಲೆಯಲ್ಲಿ ಹಿಂದಿನ ಕವಿಕಲ್ಪನೆಗಳ ಪ್ರೇರಣೆಯಿಂದ ನೂತನಪ್ರತಿಭೆ ಮೂಡಿಬಂದಿದೆ.

ತೊರವೆ ರಾಮಾಯಣದ ಯುದ್ಧವರ್ಣನೆಗಳು ಅತಿ ದೀರ್ಘವಾಗಿ ಬೇಸರ ತರುವಂತಿವೆ. ಆದರೆ, ಇಲ್ಲಿ, ದೀರ್ಘ ವರ್ಣನೆಗಳಿದ್ದರೂ ವೈವಿಧ್ಯವಿದೆ. ಅಗತ್ಯಕ್ಕೆ ತಕ್ಕಂತೆ ಸೊಗಸಾಗಿವೆ.

"ಬಿಲ್ಲ ಕೊಪ್ಪಿನಲಿರಿದು ಚೌಪಟವುಲ್ಲ..."
"ನೆಟ್ಟ ಸಂತಕನೂರು ತುಂಬಿತು"
"ಕೋಲ ಮೊನೆಯಲಿ ಮಾತನಾಡ್ಯೆ"

ಮುಂತಾಗಿ ಕುಮಾರವ್ಯಾಸನ ಶೈಲಿ ಹಲವು ವರ್ಣನೆಗಳಲ್ಲಿದೆ. ರಥವನ್ನು ಹುಡಿಗುಟ್ಟುವುದು, ಸೈನ್ಯ ಮೆದೆಗೆಡೆವುದು, ರಕ್ತದ ಕಡಲಲ್ಲಿ ಮುಳುಗುವುದು, ಬಿಸಿ ರಕ್ತ ಉಕ್ಕುವುದು ಮುಂತಾಗಿ ಯುದ್ಧದಲ್ಲಿ ಬರುವುದು ಸಹಜ. ಅಸ್ತ್ರಕ್ಕೆ ಪ್ರತ್ಯಸ್ತ್ರ ವರ್ಣನೆಯೂ ಪೌರಾಣಿಕ ಯುದ್ಧದ ತೆರನಾದುದೇ.

ಕವಿ ಪ್ರತಿಭೆಯಿಂದ ನೂತನ ಚಾತುರ್ಯ ಹಲವೆಡೆ ಕಾಣುತ್ತದೆ, ಸುಗ್ರೀವನು ನಮ್ಮ ಬಾಣಗಳು ಅವನ ಮೆದುಳನ್ನು ಅವನೇ ನೋಡುವಂತೆ ಮಾಡುತ್ತವೆ ಎನ್ನುತ್ತಾನೆ.

"ಕೋಟೆಗಳಸಿಳಿದೋಡಿತತ್ತಲು ನೋಟಕರು ಕಂಗೆಟ್ಟು, ಕಪಿಗಳ ಕಾಟ ಬಿರಿಸಾಯ್ತು."

ಕುಂಭಕರ್ಣನು ಯುದ್ಧದಲ್ಲಿ ಅಟ್ಟಿ ಕಪಿಗಳ ಚಿಗುಳಿದುಳಿದನು, ರವಿಸುತ ಹೊಡೆಯೆ ಗದೆಯಲಿ ಹಿಟ್ಟುಗುಟ್ಟಿದ. ಅವನು ಯುದ್ಧದಲ್ಲಿ ಕಪಿಗಳನ್ನು ನುಂಗುವ ಭೀಷಣ-ಅದ್ಭುತ ವರ್ಣನೆಯಿದೆ. ಲಕ್ಷ್ಮಣ ಬಾಣ ಹೊಡೆಯಲು ಅವನ ಬಸುರ ಸೀಳಲು ಅಲ್ಲಿ ಕಟ್ಟಿದ ಘಂಟೆ ಬಿದ್ದು ಎರಡು ಸಾವಿರ ಜನರು ಸತ್ತರಂತೆ! ಬಾಯ ಬರ ಬಿಡೆ ಬಲದಲೆಡದಲಿ ತುಂಬಲಾಯಿತು ನೆರೆದ ಮರ್ಕಟರ! ಸರಳು ಸರಳನು ಕಾರುತಿದ್ದುವೊ ಸರಳುಗಳು ಪಡಿಸರಳ ಸುರಿದುವೊ ಎಂದು ಪುಂಖಾನುಪುಂಖ ಶರಗಳನ್ನು ಬಣ್ಣಿಸುವ ರೀತಿಯಲ್ಲಿ ಹೊಸತನವಿದೆ.

ಯುದ್ಧವರ್ಣನೆಗಳ ಬಿರುಸು ಹಲವೆಡೆ ಜೋರಾಗಿಯೇ ಇದೆ

ಸೊಕ್ಕಿ ಧೂಮ್ರನು ದಾಡೆಗುಟ್ಟುತ
ಮರ್ಕಟರ ಕಡಿಖಂಡ ಮಾಡುತ
ದಿಕ್ಕುಗೆಟ್ಟೋದರುತ್ತ ಕಂಗೆಟ್ಟೋಡುತಿರೆ ಜಗಿದು ॥
ಮುಕ್ಕಿದನು ಕ:ರುಕಿದನ ಶರದಲಿ
ಚಿಕ್ಕನರಿದನು.

ಇದಕ್ಕೆ ಪ್ರತಿಯಾಗಿ ಭೀಮನು ಗಿರಿಗಿರಿಗುಟ್ಟಿ ಅಂದರೆ, ಸುಂಟರಗಾಳಿಯಂತೆ ತಿರುತಿರುಗಿ ಆರ್ಭಟಿಸಿ ಬಂದು ಆತನ ರಥವನ್ನೊದೆದ ಬಣ್ಣನೆಯಲ್ಲಿ. ಕೆರಳಿದನು ದನುಜನ ಹಿಡಿದು ಸರ್ರನೆ ತಿರುಹುತಪ್ಪಳಿಸಿ ಎಂಬಲ್ಲಿ ಸಾಕಷ್ಟು ಜೋರಿದೆ.

ರಾವಣ ಕೊಂತದಲ್ಲಿ ಇರಿಯಲು, ನೀಲ ಜಗಜಟ್ಟಿಯು ಆ ಭಲ್ಲೆಯ ಹಿಡಿದು ಜೋಲುತ್ತ ಹಾರಿ ರಾವಣನ ಮಕುಟದ ಮೇಲೆ ಮಂಡಿಸಿ ಕಪಿಚೇಷ್ಟೆ ಮಾಡಿದನು.

ಹನುಮನು ಇಂದ್ರಜಿತ್ತುವಿನ ಕೆಚ್ಚೆದೆ ಬಿರಿವಂತೆ ತಿವಿದಾಗ ಅವನು ಕರುಳನ್ನು ಕಾರುತ್ತ ನೆಲಕ್ಕೆ ಉರುಳಿ ಬಿದ್ದನು. ಎದ್ದ ರಕ್ಕಸನು ಗುಡುಗುಡಿಸಿ ಗದೆಯಿಂದ ಹೊಡೆಯಲು ಹನುಮನ ಹಣೆಯ ಚಿಪ್ಪುಗಳೊಡೆದವು.

ಇಂದ್ರಜಿತು ನಿಕುಂಭಲಾದೇವಿಗೆ ಮಾಡುವ ಯಾಗ ವರ್ಣನೆಯು ಆನಂದ ರಾಮಾಯಣದ ವರ್ಣನೆಯನ್ನು ಅನುಸರಿಸಿದೆ. ಆವರೆ ತನ್ನ ಉದರ ಬಗಿದು ಬೆರಳು ಬದಿಯೆಲುವಿ

ನಿಂಧನಾದಿಗಳನ್ನು ಉರಿಗೆ ಒಟ್ಟಿ, ತನ್ನ ತಲೆಯನ್ನರಿಯಲು ಅಲಗನ್ನು ಕಿತ್ತಾಗ ನಿಕುಂಭಿನಿ ಪ್ರತ್ಯಕ್ಷಳಾಗಿ ನಾಗಪಾಶ ನೀಡಿದು ದರಲ್ಲಿ ವೈಶಿಷ್ಟ್ಯವಿದೆ. (೧೯:೩೭) ವಾಲ್ಮೀಕಿರಾಮಾಯಣದಲ್ಲಿ ಇಂದ್ರಜಿತು ಆಭಿಚಾರ ಹೋಮದಲ್ಲಿ ಬ್ರಹ್ಮಾಸ್ತ್ರ ಮುಂತಾದು ವನ್ನು ಆಮಂತ್ರಿಸುವುದಿರುವುದಾದರೂ ಈ ಬಣ್ಣನೆಯಿಲ್ಲ. ಇನ್ನೊಂದು ಮಾರಣಹೋಮವರ್ಣನೆಯಲ್ಲಿ ಮಂತ್ರಾಸ್ತ್ರ ಗಳನ್ನು ಹೋಮದಲ್ಲಿ ಹಾಕಿ, ತನ್ನ ಪಾದ, ಜಂಘೆ, ಇತ್ಯಾದಿ ಕಡಿದು ಆಹುತಿಹಾಕಿ, ತನ್ನ ತಲೆಯನ್ನು ಕಡಿದು ಬೇಳಿದನು. ಮತ್ತೆ ಮತ್ತೆ ಹಂದಲೆ ಮೂಡಿದರೂ ಆಹುತಿ ಹಾಕುತ್ತಲೇ ಇದ್ದನೆಂಬ ಅತ್ಯುಕ್ತಿಯ ಪರಮಾವಧಿಯ ವರ್ಣನೆ ಬೇರೆ ರಾಮಾ ಯಣಗಳಲ್ಲಿ ಇದ್ದಂತಿಲ್ಲ. (೨೮-೧೧, ೧೮-೧೯)

೯. ಪಾತ್ರಚಿತ್ರಣ

ಪಾತ್ರಚಿತ್ರಣದಲ್ಲಿ ಹೆಚ್ಚು ಮೂಲಾನುಸಾರಿಯಾಗಿ ಕವಿಯು ಪರಿಮಿತ ಯಶಸ್ಸನ್ನು ಪಡೆದಿದ್ದಾನೆ. ರಾಮನು ಮಹಾವಿಷ್ಣುವಿನ ಅವತಾರವೆಂದೇ ಚಿತ್ರಿಸಿದ್ದರೂ ಅವನ ಮಾನುಷಲೀಲೆಯ ಚಿತ್ರಣವೂ ಉಂಟು. ಶಿಶು ರಾಮನಿಗೆ ಭೂತ ಹೊಡೆದುದುಂಟು. ಯುದ್ಧದಲ್ಲಿ ಸರ್ಪಾಸ್ತ್ರದಿಂದ ಬಂಧಿತನಾದಾಗ ನಾರದ ಗುರುಡನನ್ನು ನೆನೆ ಎಂದ ಮೊದಲು ತಾನು ಅವತಾರಿಎಂಬ ನೆನಪಿದ್ದಂತಿಲ್ಲ. ಆದರೆ, ಗುರುಶುಶ್ರೂಷೆ ಹರಿಯ ನಾಟಕ. ಮಂಥರೆಯನ್ನು ಹೊಡೆವಲ್ಲಿ ಪ್ರಾಕೃತರ ರೀತಿಯಿದೆ. ಕೊನೆಗೆ ನಿನ್ನಿಂದಲೇ ವಿಜಯ ಬಂದಿತೆಂದು ಸುಗ್ರೀ ವನನ್ನು ಹೊಗಳಿದ್ದು ಭೂಷಣಾಸ್ಪದವಾಗಿದೆ.

ಲಕ್ಷ್ಮಣ ಅಣ್ಣನಂತೆಯೇ ಭ್ರಾತೃವತ್ಸಲ. ಸೀತೆಯ ಪಾತ್ರವು ಸಂಕ್ಷಿಪ್ತವಾಗಿದೆ. ಚಿತ್ರದ ಬೊಂಬೆಯಾಡಿಸಿದಾಗ ಅಸೂಯೆ ಹೊಂದಿದ್ದ ಅವಳು ಶೂರ್ಪನಖಿ ಸುಂದರಿಯಾಗಿ ಬಂದಾಗ ದಯೆಯನ್ನೇ ತೋರುತ್ತಾಳೆ. ಶೋಕವರ್ಣನೆ ಹೃದಯಂಗಮವಾಗಿದೆ.

ಹನುಮಂತನ ಕಥೆಯಲ್ಲಿ ಪುರಾಣದ ಸತ್ಯ-ಮಿಥ್ಯೆಗಳ ಬೆರಕೆಯಿದೆ. ಶಿವಭಕ್ತನೂ ಆದ ಇವನು ಶಿವನಿಲಯಗಳನ್ನು ಸುಡಲಿಲ್ಲ. ಸ್ವಾಮಿಕಾರ್ಯಧುರಂಧರ, ಇವನ ಹಾಸ್ಯದೃಷ್ಟಿ ಅಲ್ಲಲ್ಲಿ ಮಿಂಚಿದೆ. ಲಂಕಿಣಿ ಯಕ್ಷಿಣಿಯಾಗಿ ನಿಂದಾಗ, ವರ ಕೇಳೆಂದಳು. "ನೀನು ನನ್ನ ಮುಂದೆ ಇರದಿಪ್ಪುದೇ ವರ!" ಎಂದನು ಈ ಬಾಲ(ವುಳ್ಳ) ಬ್ರಹ್ಮಚಾರಿ! ಮಂಡೋದರಿ ಸೀತೆಯೋ ಅಲ್ಲವೋ ಎಂದು ಪರೀಕ್ಷಿಸಲು ಅವಳ ತಲೆಯ ರೋಮ ಬೋಳಿಸಿ, ಮುಂಡು ಧಾರೆ ನೋಡಿ ನಿಷ್ಕರ್ಷಿಸಿದನು. ಲಂಕೆಯನ್ನು ಸುಟ್ಟನೆಂದಾಗ, ಒಂದೆರಡು ಮನೆಗಳು ಸುಟ್ಟುವು (ತಾನು ಸುಟ್ಟೆ ಎನ್ನಲಿಲ್ಲ) ಎಂದ ಈ ಜಾಣನಿಗೂ ಕಾಶಿಯಿಂದ ಶಿವಲಿಂಗ ತಂದಮೇಲೆ ಗರ್ವ ಬಂದು. ಮಳಲಲಿಂಗ ಅಲುಗಿಸಲಾರದೆ ಭಂಗವಾಯಿತು. ಈ ಅಂಕದ ಕಪಿಯ ಸಾಹಸ ಬಹಳ.

ವಿಭೀಷಣನ ಭಾವನೆಗಳನ್ನು ಕವಿ ಹೃದಯಂಗಮವಾಗಿಸಿದ್ದಾನೆ. ಮಾತೃವತ್ಸಲನಾದ ಇವನು ತಾಯಿಗೆ ಸ್ವಪ್ನದರ್ಶನವಾದ ಮೇಲೆ ಅಣ್ಣಗೆ ಬುದ್ಧಿವಾದ ಹೇಳಿ ದಬ್ಬಲ್ಪಟ್ಟನು. ಹಲವು ಬಾರಿ ರಾಮನಿಗೆ. ಸಲಹೆ-ಸಹಕಾರ ನೀಡಿದನು. ಶಕ್ವರಿ ಯುದ್ಧಕ್ಕೆ ಬಂದಾಗ, ಇವನನ್ನು ಕಾಪೆನೆಂದರೂ ಬೇಡವೆಂದು

ಹೇಳಿ, ಇಂಥ ಮಗನ ಪಡೆದ ತಾನು ಎಂಥಪಾಪಿಯೋ ಎಂದು ತಪಿಸಿದುದು ಅಪೂರ್ಣವಾಗಿದೆ.

ರಾವಣಪಾತ್ರಚಿತ್ರಣ ಅತ್ಯಂತ ಯಶಸ್ವಿಯಾದುದು ಸೀತಾಸ್ವಯಂವರದಲ್ಲಿ ನಗೆಗೆಡೆಯಾದ ಚಿತ್ರಣ ಮೆಚ್ಚುಗೆ ನೀಡುತ್ತದೆ. ಈತನ ಭವ್ಯತೆಯನ್ನೂ ವಿವಿಧ ಮುಖಗಳಲ್ಲಿನ ವಿವಿಧ ಭಾವನೆಗಳನ್ನೂ ಚನ್ನಾಗಿ ಬಣ್ಣಿಸಿದ್ದಾನೆ. ವಿಡಂಬನೆ ಯಶಸ್ವಿಯಾಗಿದೆ. ಸೀತೆಗೆ ಬಲಾತ್ಕಾರ ಮಾಡದಿರಲು ಈತನ ಶಾಪಭೀತಿ ಕಾರಣ. ಮಾಯಾರಾಮವಧೆ, ಮಾಯಾ ಸೀತಾವಧೆ ಮುಂ. ವಾಲ್ಮೀಕಿಯಲ್ಲಿ ಇದ್ದಂಥವು. ಅಂಗದದೌತ್ಯದಲ್ಲಿ ಭೇದನೀತಿ ಪ್ರಯೋಗ ದಶಶಿರನ "ಬಹುಬುದ್ಧಿ" (ವಂಚಿಕೆಯ) ನಿದರ್ಶನ. "ಹಿಡಿದುದನು ಬಿಡೆ" ಎಂದು ಛಲಗಾರನಾಗಿದ್ದಾತ ಮಾಯಾ ರಾಮನ ಶಿರತೋರಿ, ಪಾಪಿದೈತ್ಯರು ಕೊಂದರು. ಹಿಡಿದು ಬಿಡುವರ ಗಂಡನೆಂಬ ಬಿರುವ ಕೆಡಿಸಿದರು ಎಂದ. ಚಮತ್ಕಾರದ ಸಟೆಯನ್ನು ನುಡಿಯುತ್ತಾನೆ. ಕರುಳು ಹೊರಬಿದ್ದಾಗಲೊಮ್ಮೆ ಸಾವೆನೆಂದು ತಿಳಿದು ಸೀತೆಯನ್ನೊಪ್ಪಿಸಲು ತಿಳಿಸಿದ್ದನು.

ತನ್ನವರು ಮರಣಹೊಂದುತ್ತಿದ್ದಂತೆ ಅವನಿಗೆ ಪಶ್ಚಾತ್ತಾಪವುಂಟಾಗುತ್ತಲಿತ್ತು. ಕುಮಾರವ್ಯಾಸನ ದುರ್ಯೋಧನನಂತೆಯೇ "ತನ್ನ ವೈರಿ ಮಹಾವಿಷ್ಣುವೇ; ಅವನೊಡನೆ ಹೋರಾಡಿ ಕೈವಲ್ಯವನ್ನು ಪಡೆವೆ" ಎಂದು ಹೇಳಿದ್ದನು. ಸೀತೆಯನ್ನು ಒಪ್ಪಿಸೆಂದ ವಿಭೀಷಣನನ್ನು ಕೊಲ್ಲಲು ಚಂದ್ರಹಾಸವನ್ನೆತ್ತಿದ್ದ ಆತನು ಕೋಪ ಶಮಿಸಿದಾಗ "ತಮ್ಮನೆಲ್ಲಿ ಹೋದನೋ. ಹಗೆ ಅವನನ್ನು ಕೊಲ್ಲಬಹುದು" ಎಂದು ದುಃಖಿಸಿದನು.

ವಾಲ್ಮೀಕಿಯ ಶೂರ್ಪನಖಿ ರಾಕ್ಷಸಿಯ ರೂಪಿನಿಂದಲೇ ರಾಮನನ್ನು ಸಂದರ್ಶಿಸುತ್ತಾಳೆ. ತಾನು ಕಾಮರೂಪಿಣಿಯೆಂದೂ ಹೇಳಿ ತನ್ನನ್ನು ರಮಿಸಲು ಕರೆಯುತ್ತಾಳೆ. ಬೇರೆ ಹಲವು ಕವಿಗಳು ಅವಳು ರೂಪವತಿಯಾಗಿಯೇ ರಾಮನನ್ನು ಮೋಹಗೊಳಿಸಲು ಬಂದಳೆಂದು ಚಿತ್ರಿಸಿರುತ್ತಾರೆ. ಶ್ರೀರಾಮನ ಮಾತಿನಲ್ಲಿ "ಮನೋಜ್ಞಾಂಗೀ" ಎಂದು ವಾಲ್ಮೀಕಿಯಲ್ಲಿ ಅಣಕದ ಅರ್ಥದಲ್ಲೇ ಬಳಕೆಯಾದರೂ ಈ ಮಾತಿನಿಂದ ಪ್ರೇರಣೆಪಡೆದು ಸನ್ನಿವೇಶದ ಸೊಗಸನ್ನು ಹೆಚ್ಚಿಸಲು ಮಾಯಾರೂಪ ಧರಿಸಿ ಬಂದಂತೆ ಚಿತ್ರಿಸಿದ್ದಾರೆ.

ಬತ್ತಲೇಶ್ವರನ ಶೂರ್ಪನಖಿ ಶಂಬೂಕನ ಮರಣದ ಕುರಿತು ದುಃಖಿಸಿ, ಸೇಡು ತೀರಿಸಲು ಪ್ರತಿಜ್ಞೆ ಮಾಡುತ್ತಾಳೆ. ಆದರೆ, ಪ್ರಾಕೃತಿಕ ಮನೋಭಾವನೆಯಿರುವ ಈ ಹೆಣ್ಣು ಶ್ರೀರಾಮನ ತೇಜಸ್ಸನ್ನು ನೋಡಿಯೇ ದಂಡದಿಂದ ಗೆಲ್ಲಲಾಗದೆಂದು ನಿರ್ಧರಿಸಿ, ಮೋಸವನ್ನು ಆಶ್ರಯಿಸಿ, ಮಾಯಾಸುಂದರಿಯಾಗಿ ಬಂದುದರಿಂದ ತಕ್ಕಮಟ್ಟಿಗೆ ನಿಪುಣೆಯೆಂದೆನ್ನಬಹುದು.

ವಾಲ್ಮೀಕಿಯ ಲಕ್ಷ್ಮಣನು ಸೀತೆ ವಿರೂಪಾ, ಕರಾಲಾ, ವೃದ್ಧೆ. ನೀನೇ ಆರ್ಯನ ಭಾರ್ಯೆಯಾಗು (ಆಗಲು ತಕ್ಕವಳು) ಎನ್ನಲು ನಿಜವೆಂದು ತಿಳಿದು ಸೀತೆಯನ್ನು ತಿನ್ನಲು ಹೋದಳು.

ಬತ್ತಲೇಶ್ವರನ ಶೂರ್ಪನಖಿಯು ಚಿತ್ರಣ ವಾಲ್ಮೀಕಿಯ ಜಾಡಿನಲ್ಲಿ ಸ್ವಲ್ಪ ಇದ್ದರೂ ನಾಗಚಂದ್ರನ ಶೂರ್ಪನಖಿಯು ಹಾಗೆ ಪ್ರಾರಂಭದಲ್ಲಿ ನಡೆದುಕೊಂಡು, ಲಕ್ಷ್ಮಣನಿಂದ ತಿರಸ್ಕೃತಳಾದ ಮೇಲೆ ದನುಜಾಕಾರೆಯಾಗಿ ರಾಮನ ಬಳಿ ಬರುತ್ತಾಳೆ.

ಅವನಿಂದ ಬೆನ್ನ ಮೇಲೆ ಕುರುಹನ್ನು ಬರೆಸಿಕೊಂಡು ಬರುವಾಗ "ಮರೆಸಿ ಕಪಟದಿ ಮೆರೆವ ಮುರುಕಿನ ಚಿನ್ನ"ವೆಂದು ಬಹು ಸೊಗಸಾಗಿ ಕಿರಿದರಲ್ಲಿ ಸೂಚಿಸಿದುದರಲ್ಲಿ. ರಾಮನ ಹತ್ತಿರ ರಾಕ್ಷಸಿಯಾಗಿಯೇ ಹೋಗಿದ್ದರೂ ಪುನಃ ಲಕ್ಷ್ಮಣನ ಬಳಿ ಬರುವಾಗ ಮೊದಲಿನಂತೆ ಮೋಹನಾಕಾರೆಯಾಗಿ ಬಂದು ಮುರುಕನ್ನು ತೋರುವಳೆಂಬ ಬಣ್ಣನೆ ಬಹಳ ಸೊಗಸಾಗಿದೆ. ತೊರವೆ ರಾಮಾಯಣದಲ್ಲಿ ಮಾಯಾರೂಪಿನಲ್ಲಿಯೇ ಈ ಸನ್ನಿವೇಶದಲ್ಲಿ ನಟನೆ ಮಾಡಿ, ತಿರಸ್ಕೃತಳಾದಾಗ ಕ್ರೋಧ ತೋರಿದರೂ ಕಿವಿ ಮೂಗು ಕೊಯ್ದ ಮೇಲೆಯೇ ಹಲ್ಲು ತೋರಿ ರಕ್ಕಸರೂಪ ಕೈಕೊಂಡಳು.

ಬತ್ತಲೇಶ್ವರನ ಶೂರ್ಪನಖಿ ಮೂಕೊರತಿಯಾದ ಮೇಲೆ ಲಂಕೆಯ ಇತರ ರಕ್ಕಸಿಯರ ಕಿವಿಮೂಗುಗಳನ್ನೂ ಅವರು ತನ್ನನ್ನು ನೋಡಿ ನಗದಿರಲೆಂದು ಕೊಯ್ಯಿಸುತ್ತಿದ್ದಳಂತೆ! ತನ್ನಂತೆಯೇ ಮೂಕೊರತಿಯರಾಗಿ ತನ್ನಂತೆಯೇ ಆಗಿರಿ ಚೆನ್ನೆಯರೇ ಎಂದು!

ಸೀತಾ ಸ್ವಯಂವರದಲ್ಲಿ ಧನುವನ್ನೆತ್ತಿದ ರಾವಣನ ಭಂಗದಲ್ಲಿ ಸೀತೆ ಸಕ್ಕುದನ್ನೂ ರಾಮನು ಧನುಸ್ಸನ್ನೇ ಭಂಗಗೈದು ಅವಳನ್ನು ಗೆದ್ದವನು ಅಡವಿಯಲ್ಲಿ ಅವಳೊಡನೆ ಸುಖದಿಂದಿರುವುದನ್ನೂ ಹೇಳಿ, ಅಣ್ಣನ ಮೋಹವನ್ನೂ ಸೇಡನ್ನೂ ಕೂಡಿಯೇ ಕೆಣಕಿ ಉದ್ದೀಪಿಸಿದ ಪರಿಯು ಕವಿಪ್ರತಿಭೆಯ ಮೇಲ್ಮಟ್ಟದ ದ್ಯೋತಕವಾಗಿದೆ.

೧೨. ದೇಸಿ ನುಡಿಗಳು

ಕವಿಯು ಉತ್ತರ ಕನ್ನಡ ದೇಸಿ ನುಡಿಗಳನ್ನು ಬಹಳ ಬಳಸಿದ್ದಾನೆ. ಬಾಯೊಳಗೆ ಒಟ್ಟಿದರು (ತುರುಕಿದರು), ಜಪ್ಪು (ಹೊಡೆ, ಬಡಿ), ಚಚ್ಚು (ಎತ್ತಿಕೋ), ಪೆಟ್ಟು (ಚುಚ್ಚು, ಸೇರಿಸು), ಗೋಳುಗುಟ್ಟು (ಗೋಳಾಡು). ಗುಜುಗುಜುಗುಟ್ಟು ಪಿಸುಮಾತಾಡು, ಹೊಟ್ಟಿ ಹಾರಿತು (ಸ್ಫೋಟವಾದಂತೆ ಶಬ್ದ ಮಾಡಿ ಹಾರಿತು), ಕತ್ತು (ಉರಿ, ಹೊತ್ತು) ಹಲ್ಲು (ದಾಡೆ) ಕಡಿ ಎಂಬ ಅರ್ಥದಲ್ಲಿ ದಾಡೆಗುಟ್ಟು, ಗೊರೆ (ಗೊರಕೆಹೊಡೆ) ಮದ್ದನರೆ (ತಕ್ಕ ಶಾಸ್ತಿ ಮಾಡು; ಇಲ್ಲಿನ ಮದ್ದು ಅಂದರೆ, ವಿಷ) ಹುಟ್ಟಿರ್ದ ಪರಿಯಲಿ (ಹುಟ್ಟಿದ ರೂಪದಲ್ಲಿ, ಅಂದರೆ, ಬತ್ತಲೆಯಾಗಿ), ಹಿಡಿದುದನು ಬಿಡೆ (ಛಲಬಿಡೆನು) ಹಳುಗಾಗು (ಹಳ್ಳಗಾಗು, ಹುಳ್ಳಗಾಗು ಎಂದೂ ರೂಢಿಯಲ್ಲಿ ಉಂಟು) ಅಂದರೆ, ನಿಷ್ಪ್ರತಿಭನಾಗು, ಸ್ತಬ್ಧನಾಗು, ಬೆಳ್ಳಾಗು, ಹೋದ (ಸತ್ತ) ಹಳವಿಸು, (ಹಳಗಿಸು ದೊಡ್ಡದಾಗಿ ಅಳು) ಇತ್ಯಾದಿ, ಹೊಳಕು ಎಂಬುದು ಈಗ ಹೊಳಬು ಎಂದು ಪ್ರಯೋಗದಲ್ಲಿದ್ದು ಅದರ ಅರ್ಥ ನಾಲಿಗೆ ಚಲನಗೈದು ಸೀಪು ಎಂದಿದೆ.

ಕಾನನ ಎನ್ನಲು ಕಾನು (ಕಾನ ಕೋಡಗ), ಸೀಳಕೋಲು ಅಂದರೆ, ದಂಟುಕೋಲು, ದೊಡ್ಡ ಬುಟ್ಟಿ ಎನ್ನಲು ಹೆಡಗೆ, ಗಡುತರ ಎನ್ನಲು ತೋರ (ಈ ಶಬ್ದ ಕುಮಾರವ್ಯಾಸನಲ್ಲೂ ಇದೆ) ಎಂದಿದೆ. ಹುಡುಗಾ ಎಂಬರ್ಥದಲ್ಲಿ ರಾಮನು ತಮ್ಮನಿಗೆ 'ಮಾಣಿ ಹೋ' ಎಂದು ಕರೆಯುತ್ತಾನೆ.

ಸುಟ್ಟ ದುರ್ಗಂಧ ಎನ್ನಲು 'ಗಮರು' ಹೊಲಸಿನ ಪೋಮು ಎಂದಿದೆ. ರಂಭೆ ಪೂತಿಹ ಪೂಗವನು ಬಿಗಿದಪ್ಪಿ ಕೃತ **ಸಿಂಗಾರೆ** ಎಂಬಲ್ಲಿ ಅಡಿಕೆಯ ಹೂವನ್ನು ಸಿಂಗಾರ ಎಂದು ಸೂಚಿಸಿ ಶ್ಲೇಷೆಯನ್ನು ಬಳಸಿದ್ದಾನೆ. ಗೋರೆ ಎಂಬ ಶಬ್ದ ಉಬ್ಬಿದ ಭಾಗ. ಕಪಿಗಳ ಗಲ್ಲದ ಉಬ್ಬಿದ ಭಾಗವೆಂಬ ಅರ್ಥ ವಲ್ಲಿ ಇದು ಬಂದಿದೆ. ಚಕ್ಕಣೆ (ಇದು ಚಿಕ್ಕಣೆ ಎಂದಿರಬೇಕು) ಅಂದರೆ, ಸುಲಿದು ಒಣಗಿಸಿದ ಎಳೆಯ ಅಡಿಕೆ–ಚಿಕಣಿ.

ಬಿದಿರಿನ, ಅಥವಾ, ಬೆತ್ತದ ಸೀರಾದ, ನೀಳವಾದ ಕೋಲುಗಳಿಂದ ಮಾಡಿದ ಸೆಳೆಯುಮಂಚದ ಉಲ್ಲೇಖವಿಲ್ಲಿದೆ. ಬಗನಿಮರಕ್ಕೆ ಇಲ್ಲಿಯ ರೂಢಿಯಂತೆ ಬಯನಿ ಎಂದೇ ಪ್ರಯೋಗವಿದೆ.

ಆಂಡಯ್ಯನ 'ಕಬ್ಬಿಗರ ಕಾವ್ಯ'ದಲ್ಲಿ ಪೂಲಿ, ಮಗಲಿ, ದೋರಿಯ ಎಂಬ ಬಟ್ಟೆಗಳ ಉಲ್ಲೇಖವಿದೆ. ಇಲ್ಲಿ 'ಜರಿಯ ಪುಲ್ಲಿಯ' ಎಂಬ ಮಾತು ಬಂದಿದ್ದು, ಪುಲ್ಲಿ, ಜರಿ ಸಹಿತ ಇರುವ ಪಟ್ಟೆ, ರೇಸಿಮೆ ಬಟ್ಟೆ ಎಂಬುದು ಸ್ಪಷ್ಟವಾಗಿದೆ–ಪಟ್ಟವಾಳಿ ಎಂಬುದು ಪಟ್ಟೆಕಂಬಿ, ಬದಿಯಲ್ಲಿ (border) ಕೆಂಪು ಬಣ್ಣ (ಸಾಮಾನ್ಯವಾಗಿ) ಇರುವ ಬಟ್ಟೆ, ರೇಸ್ಮೆದೋತರ ಬಣ್ಣ ಅಂದರೆ ಬಣ್ಣದ ಸೀರೆ ಎಂಬುದು ಬೇರೆಡೆ ಸಹ ಇದ್ದರೂ ಉತ್ತರಕನ್ನಡ ಹಳ್ಳಿಗರ ರೂಢಿಯಲ್ಲಿ ಈ ಶಬ್ದದ ಬಳಕೆ ಹೆಚ್ಚಾಗಿದೆ (ಚಿನ್ನ–ಬಣ್ಣ) ಈ ಕಪಿ ಹಲವು ಸೀರೆ ಎಂಬ ಅರ್ಥದಲ್ಲಿ ಹಲವು ವರ್ಣ ಎಂದು ಬಳಸಿದ್ದಾನೆ.

ಉ. ಕ. ದೇಸಿನುಡಿಗಟ್ಟು (idioms) ಹಲವೆಡೆ ಬಳಕೆಯಾಗಿದೆ. ರಕ್ಕಸನು ಸೋತನೆಂದರೆ "ಹಣೆಯಲುಂಟೇ..." ಎಂಬುದು ಸೋಲಿಸುವುದು ಅಸಾಧ್ಯ (ಹಣೆಯಲ್ಲಿ ಬರೆದಿಲ್ಲ) ಎಂಬ ಅರ್ಥದಲ್ಲಿದೆ. 'ಎಲುಗಳಿಲ್ಲಾ ನಿನ್ನ ನಾಲಿಗೆಗೆ' ಎಂದರೆ, ನಿನ್ನ ನಾಲಿಗೆ ಬೇಕಾದ ಹಾಗೆ ತಿರುಗುತ್ತದೆ. ಸುಳ್ಳನ್ನು ಹೇಳಲು ಸಲೀಸು ಎಂದಾಯಿತು. ಆಡಬಂದನೊ ಹಗರಣಂಗಳ "ದಕ್ಷಿಣೋತ್ತರ ಕನ್ನಡಗಳಲ್ಲಿ ಆಡು" ಎಂಬುದನ್ನು ಪ್ರದರ್ಶಿಸು ಎಂಬ ಅರ್ಥವಲ್ಲಿ ಹೆಚ್ಚು ಬಳಸುತ್ತಾರೆ. ಉಗುಳಬಾರದು ನುಂಗಬಾರದು ಸಂಕಟದ ಪರಿಯು' ಇದು ಪರಿಣಾಮಕಾರೀ ದೇಸಿ ನುಡಿ. ಭವಿಷ್ಯ ಹಾರಿತಲ (ಸುಳ್ಳಾಯಿತು), ಛಿದ್ರ ಎಂದರೆ ನಿಂದೆ ಎಂಬ ಅರ್ಥದಲ್ಲಿ (ಲೋಕಕೆ ಛಿದ್ರ) ಇಲ್ಲಿದೆ. ತೀರಾ ಎಂಬ ಅರ್ಥದಲ್ಲಿ 'ಹಸೀ' ಶಬ್ದ ವಿದೆ. 'ಹಸಿಯ ಹಾದರಿಗ (ರಾವಣ) ಇಂಥ ಪ್ರಯೋಗ ನಮ್ಮಲ್ಲಿ ಹಲವೆಡೆ ಇದೆ. 'ಹಸೀ ಸುಳ್ಳ' 'ಹಸೀ ಘಟಿಂಗ' ಇತ್ಯಾದಿ.

'ಸೇನೆ ಮೆದಗೆಡೆಯೆ' ಎಂಬುದು ಹುಲ್ಲಿನ ಹೊರೆಗಳು ಬಿದ್ದಂತೆ ಸೇನೆ ಬಿದ್ದುದು ಎಂಬ ಹೋಲಿಕೆಯಲ್ಲಿದೆ. ಆದರೆ ಡಾ. ಕಾರಂತರು ಈ ರೂಢಿಯ ಮಾತಿನ ಅರ್ಥ ತಿಳಿಯದೆ, "ಗುಂಪು ಚದುರು" ಎಂಬ ತಪ್ಪು ಅರ್ಥ ಕೊಟ್ಟಿದ್ದಾರೆ, (ಗ್ರಂಥದ ಶಬ್ದಕೋಶ-ಪುಟ ೯)

ಮಾಳದ (ಇದು ಮೋಳದ ಎಂದಿರಬೇಕು) ಬೆಕ್ಕು ಪೊರಲುತಿರೆ ಎಂಬಲ್ಲಿ, ಮಾಳ, ಕಬ್ಬೆಕ್ಕು ಎಂಬ ಅರ್ಥ ಸರಿಯಲ್ಲ. ಇಷ್ಟೇ ಅಲ್ಲ; ಈ ಸಾಲಿನ ಸ್ವಾರಸ್ಯವೇ ಇದರಿಂದ ತಿಳಿಯದು.

ಮೋಳ ಎಂದರೆ ಗಂಡುಬೆಕ್ಕು. ಇದು ಹೆಣ್ಣು ಬೆಕ್ಕನ್ನು ಬೆದೆಗೆ (ಸಂಭೋಗಕ್ಕೆ) ಕರೆಯಲು ವಿಶಿಷ್ಟ ಸ್ವರದಿಂದ ಕೂಗುತ್ತದೆ.

ಅನೇಕ ನಾಣ್ಣುಡಿಗಳನ್ನು, ಕತೆಗಾದೆಗಳನ್ನು ಕವಿ ಬಳಸಿದ್ದಾನೆ. ಸಂಸ್ಕೃತದ ವನಿತೆ ನಕುಲನ ಕೊಂದ ಗಾದೆಕತೆ ಒಂದು ಮರದ ಕೀಲನು ವಾನರ ಕಳೆದುದಿನ್ನೊಂದು. ಕನಕನ ಕೃತ್ಯೆಯ ಕಥೆ ಪಂಪಭಾರತದಲ್ಲಿದ್ದುದು. ರಕ್ಕಸನ ಮೇಲೆ ಕೊಕ್ಕಸ (ರಕ್ಕಸನ ಮೇಲೆ ಬೊಕ್ಕಸ) ನಮ್ಮ ಒಂದು ಜನಪ್ರಿಯ ಕಥೆ.

ಶಬ್ದ ಜೋಡಿಸಿ ಕವಿ ಹಲವರನ್ನು ಸೂಚಿಸುತ್ತಾನೆ. ಕೋಡಿನ ಮುನಿ, ಒಂದು ಕೋಡಿನ ಗೊರವ (ಋಷ್ಯಶೃಂಗ) ಓಳಿದಲೆಯ (ಇತ್ಯಾದಿ ರಾವಣನಿಗೆ ಹಲವು ರೀತಿ ಹೆಸರು) ಮಳೆಯ ದೇವರು (ಇಂದ್ರ) 'ಜಡೆಯ ಜೀಯ್ಯ' (ವಿಶ್ವಾಮಿತ್ರ) ತಾಯ ಹೊಯ್ದ (ಪರಶುರಾಮ), ಸಿರಿಯ ಲಕ್ಷ್ಮಿಯ) ಸೋದರ. ಚಂದ್ರ, ನಿದ್ದೆಗೈವ ಆದರೆ ಕುಂಭಕರ್ಣ !

೧೧. ನಂಬಿಕೆ, ಆಚರಣೆಗಳು

ಆ ಕಾಲದ ಜನಜೀವನ; ಚಿತ್ರಗಳು ಧಾರಾಳವಾಗಿವೆ. ಜನರು ಜ್ಯೋತಿಷ್ಯ, ಶಕುನ, ನಿಮಿತ್ತಗಳಲ್ಲಿ ತುಂಬಾ ನಂಬಿಕೆಯನ್ನಿಟ್ಟಿದ್ದರು. ಕೇಳದೆಯೇ ತಿಥಿ ಹೇಳುವ "ಹರಕು ಜೋಯಿಸರು" ಆಗಲೂ ಇದ್ದರು. ಕೆಟ್ಟ ಕನಸಿನ ಫಲಹೇಳಿ ಶಾಂತಿ ಮಾಡಿಸಲು ರಾವಣನಿಗೆ ತಿಳಿಸಿದ್ದುಂಟು. ಚಿಕ್ಕಂದಿನಲ್ಲಿ ಸೀತೆಗೆ ಒಬ್ಬ ಬ್ರಾಹ್ಮಣನು "ಎಡಗೈನೋಡಿ" ಅಡವಿಯಲ್ಲಿ ಮುಂದೆ

ಕಾಲ ಕಳೆವಳೆಂದು ಹೇಳಿದ್ದನು. 'ಪೊಡವಿಸುತೆಗೆಡಗಣ್ಣು ಕುಣಿದುದು" ಹೆಂಗಸಿಗೆ ಇದು ಶುಭ. ದಶರಥ ಹೇಳಿದಂತೆ, 'ಹಣೆಯುಲಿ ಹಲ್ಲಿ ಕರೆದುದು' ಹರಿಕಾರರಿಗೆ ಶುಭ.

ಭವಿಷ್ಯಸೂಚಕ ಸ್ವಪ್ನಗಳು ರಾವಣನ ತಾಯಿ ಕೈಕಸೆಗೂ ಇಂದ್ರಜಿತುವಿನ ಮರಣ ಸೂಚಕಸ್ವಪ್ನ ರಾವಣನಿಗೂ ಬಿದ್ದುದುಂಟು. ಇಂದ್ರಜಾಲ ಮಾಯಾವಿದ ರಾವಣ ಸೀತೆಯು 'ಕಣ್ಣುಕಟ್ಟಿ' ರಾಮನ ಮಾಯಾಶಿರವನ್ನು ತೋರಿದ್ದನು. (ಕಣ್ಕಟ್ಟು ವಿಶಿಷ್ಟ ಮಾತು)

ಮೂವರು ಕೂಡಿ ಪ್ರಯಾಣಿಸಿದುದರಿಂದ ಕೇಡಾಯ್ತೆಂದು ಸೀತೆ ತಿಳಿದಿದ್ದಳು. ಮಾರಣಹೋಮದ ಕಾಲಕ್ಕೆ ಇದಿರಿನಲ್ಲಿ ಸೀತುದು ರಾವಣನಿಗೆ ಅಪಶಕುನವಾಗಿತ್ತು. ಅರಮನೆಯ ಶಿಖರದಲ್ಲಿದ್ದು ಗೂಗೆಗಳು ಕೂಗಿದ್ದೂ ಅಶುಭ. ಅಂಗದದೂತನನ್ನು ಕಳಿಸುವಾಗ ರಾಮನು ರಕ್ಷೆಕಟ್ಟಿ ಹರಸಿದ್ದನು. ಕಾಮ್ಯಕರ್ಮಗಳಲ್ಲಿ ಪುತ್ರಕಾಮೇಷ್ಟಿಯನ್ನು ಮಾಡಿದ್ದುಂಟು. ಅನೇಕ ಪ್ರಾಣಿಬಲಿ ನೀಡಿದ್ದುಂಟು.

ಹಲವು ಗಂಡಸರು ರಾವಣನಂತೆ ಗಡ್ಡಮೀಸೆ ಬಿಡುತ್ತಿದ್ದರು. ಸುರುಳಿ ಮಾಡಿದ ಮೀಸೆಗಳಿಂದ ಸೈನಿಕರ, ಶೋಭಿಸುತ್ತಿದ್ದರು. ಉಟ್ಟ ಮುಂಜೆರಗೆಸೆವ ಚಲ್ಲಣ,ಪಳಿ ಉಡುತ್ತಿದ್ದರು. ಆಯುಧಗಳ ಹಾಗೂ ಆಭರಣಗಳ ವಿವರ ವರ್ಣನೆ ಇಲ್ಲಿ ಉಂಟು. ಕಂಕಣಾದೇವಿ, ನಿಕುಂಭಿಳಾ, ಮಾರಿ, ಜಟ್ಟಿಗ, ಮಾಣಿಭದ್ರ, ಶಾಕಿನಿ, ಡಾಕಿನಿ, ಬೇತಾಳ,, ದೆವ್ವ–ದೇವತೆಗಳ, ಭೂತಗಳ (ಭೂತ ಹೊಡೆದಂತಾಗಿ) ಉಲ್ಲೇಖಗಳಿವೆ.

ಮದುವೆ ನಿಶ್ಚಯಿಸಿದ ವೇಳೆ ಹೆಣ್ಣಿಗೆ ಉಂಗುರವಿರಿಸಲು ಗಂಡಿನವರು ಹೋಗುತ್ತಿದ್ದರು. ಕರೆಯದಿದ್ದರೂ ಶ್ರೀಮಂತರ ಮನೆಯ ಮದುವೆ ನೋಡಲು ಅಲಂಕರಿಸಿಕೊಂಡು ಜನರು ಬರುತ್ತಿದ್ದರು. ಐದನೆಯ ದಿನ ಓಕುಳಿಯನ್ನಾಡುತ್ತಿದ್ದರು. ಯಥೇಷ್ಟವಾಗಿ ಬಳುವಳಿ ನೀಡುತ್ತಿದ್ದರು.

ಸೂಳೆಯರ ಮನೆಗಳಲ್ಲಿ ಗಿಣಿಗಳನ್ನು ಸಾಕಿ, ಕಾಮಶಾಸ್ತ್ರ ಹೇಳಲು ಅವಕ್ಕೆ ಕಲಿಸುತ್ತಿದ್ದರು. ಅಶ್ಲೀಲ ಮಾತಾಡಿ ವಿಟರನ್ನು ಮೋಹಿಸುವ ಪರಿಯನ್ನು ಕಲಿಸುತ್ತಿದ್ದರು. ವಿಟ ಕುಡಿದ ಪಾತ್ರೆಯಲ್ಲಿ ನೀರು ಕುಡಿದರೆ ಹೊಟ್ಟೆಯೊಡೆವುದೆ ? ಮುಟ್ಟಿ ಲಿಂಗವ ಬೆರಳು ಬೇವುದೆ ? ಅಣ್ಣ-ತಮ್ಮ ಎನ್ನುತ್ತಲೇ ಅವರ ಹಣ ದೋಚಬೇಕು, ಇತ್ಯಾದಿ. ವೀಣೆ ಬಾರಿಸಿ ಹಂಸೆಗಳನ್ನು ಕುಣಿಸುತ್ತಿದ್ದರು. ವಶ್ಯ ಮದ್ದು-ಮಾಟ ಪ್ರಯೋಗವಿತ್ತು ವಿಟರು ಅಣಕಿಸಿದರೂ ಲೆಕ್ಕಿಸದೆ, ಕುಂಟಣಿಯರು ಆಯದ ಹಣ ಎಣಿಸಿಕೊಳ್ಳುತ್ತಿದ್ದರು.

ಸವಿ ಮಾತಾಡಿ, ಗೆಳೆತನ ಬೆಳೆಸಿ, ಕಂಠ(ಲೆಕ್ಕಣಿಕೆ)ಗಳಿಂದ ಸುಳ್ಳುಲೆಕ್ಕ ಬರೆದು ಜನರನ್ನು ವಂಚಿಸಿ, ಅರಸರ ಹಣ ತಿಂದು ಶುಂಠರಾದ ಕರಣಿಕಧೂರ್ತರು ಇದ್ದರು.

ಅಂತ್ಯಜೆ-ಸಮ್ಮಗಾರರು, ಮಡಿವಳರು, ಚಿನ್ನಕೊಯ್ಕರು (ಸ್ವರ್ಣಕಾರರು) ಒಬ್ಬರಿಗಿಂತ ಒಬ್ಬರು ಸುಳ್ಳು ಹೇಳಿ ವಂಚಿಸು ವಲ್ಲಿ ಅಗ್ಗಳರಾಗಿದ್ದರು. (೧೦:೩೧)

ಲೆಕ್ಕ ತಪ್ಪಿಸಿ, ತೂಕ ತೊಲೆಗಳಲ್ಲಿ ಅಳತೆಯನ್ನೇ ಕಡಿಮೆ

ಮಾಡಿ, ಹೊಡೆದು (ತಿಂದು) ನಕ್ಕು ಠಕ್ಕುತನದಿಂದ ಹೆಚ್ಚು ಹಣ ತೆಗೆದುಕೊಳ್ಳುವ ವ್ಯಾಪಾರಿಗಳಿದ್ದರು.

ರಾಜ್ಯಕ್ಕಾಗಿ ತಂದೆ-ಮಕ್ಕಳನ್ನೂ ಕೊಲ್ಲುವ ದುಷ್ಟ ಬಂಧುಗಳಿದ್ದರು. ಮಟ್ಟೆಯನ್ನು ಕಣ್ಣುಗಳೆರಡರ ನಡುವೆ ಇಟ್ಟು ಯಜ್ಞಮಾಡಿ ತಾವು ದಾನಕ್ಕೆ ಪಾತ್ರರೆನ್ನುವ ಗಡ್ಡದ ದ್ವೈತ ಹೋತೃಗಳಿದ್ದಂತೆ ಅದ್ವೈತ ಭಟ್ಟರೂ ಇದ್ದರು.

ಅನೇಕರನ್ನು ಗುಲಾಮರಂತೆ ಕೊಳ್ಳುತ್ತಿದ್ದರು. "ಕೊಂಡ ಜೀವಿತವಿಲ್ಲ". ಮಾರಿಮುಖ ಹನುಮಗೆ ಹೇಳುವಲ್ಲಿ ಇದು ಸೂಚಿತವಾಗಿದೆ.

ಊಟದಲ್ಲಿ ತಾಳೆ ಮರದ ಎಲೆಗಳನ್ನು ಬಳಸುತ್ತಿದ್ದರು. ಕಜ್ಜಾಯಗಳ ಉಲ್ಲೇಖಗಳಿವೆ.

ಮನರಂಜನೆಯಲ್ಲಿ ಹಗರಣ, ನಾಟಕ, ಇಂದ್ರಜಾಲ, ಡೊಂಬರಾಟಗಳಿದ್ದವು. ಸಮಯ ತಿಳಿಯಲು ಗಳಿಗೆವಟ್ಟಲ ಬಳಕೆಯ ನೀರ ರಾಟಳ, ಮುಂತಾದವುಗಳ ವಿವರಗಳಿವೆ.

ಕಳ್ಳರ ಹಾವಳಿ ಬಹಳವಾಗಿತ್ತು, ದಶರಥ ಸತ್ತಮೇಲೆ, ಅರಾಜಕವಾಯಿತೆಂದು ಎತ್ತುಗಳ್ಳರೂ ಕನ್ನಗಳ್ಳರೂ ಪುರವನ್ನು ಸೂರೆಗೈದುದುಂಟು. ಮದುವೆ ಮುಗಿದ ಉತ್ಸಾಹದ ಸಮಯ ದಲ್ಲಿ ಹರಿಕಾರರು, ಕೈಯಲ್ಲಿ ಕುಂಚ, ಕಳ್ಳಿಗೆ (ದಂಡ) ಮತ್ತು ಸೊಂಟದಲ್ಲಿ ಹೊಂಗೆಜ್ಜೆ ಧರಿಸಿ, "ಬೀಗರ ತಂದೆಯಾಣೆ ಎನ್ನುತ್ತ ಕೇರಿಕೇರಿ ಹೊಕ್ಕು 'ಕೈಸೂರೆಗೊಂಡ ಅಪೂರ್ವ ಉಲ್ಲೇಖ ಇಲ್ಲಿದೆ. ಇದಕ್ಕೆ ರಾಜ ದಶರಥನ ಒಪ್ಪಿಗೆಯಿತ್ತು ಎಂಬ ಅಂಶವು

ಕವಿಯು ಆಗಿನ ಕಾಲದ ವಿಶಿಷ್ಟ ಪದ್ಧತಿಯೊಂದರ ಮೇಲೆ ಹೊಸ ಬೆಳಕನ್ನು ಚೆಲ್ಲಿದೆ.

ಬತ್ತಲೇಶ್ವರನು ಹಿಂದಿನ ಹಲವು ಕವಿಗಳಿಂದ ಪ್ರೇರಣೆ ಪಡೆದು ಉತ್ತಮ ಕೃತಿರಚನೆ ಮಾಡಿದರೂ ಈ ಕಾವ್ಯದಲ್ಲಿ ಕೆಲವು ಕುಂದು ಕೊರತೆಗಳುಂಟು, ಈತನ ರಾವಣನು ತೊರವೆ ರಾಮಾಯಣದ ರಾವಣನ ಹಾಗೆ ಪಯೋವಿಲಾಸದ ಜಡೆಯ ತಾಪಸಿಯಾಗಿ ಸೀತೆಯನ್ನು ಪ್ರಲೋಭನೆಗೊಳಿಸಲು ಎರಡು ಅರ್ಥಗಳುಳ್ಳ ಸ್ವಾರಸ್ಯ ಸಂಭಾಷಣೆಯಲ್ಲಿ ತೊಡಗುವುದಿಲ್ಲ. ಈ ಸನ್ನಿವೇಶದಲ್ಲಿ ಅಂಥ ಪ್ರತಿಭೆ ವ್ಯಕ್ತವಾಗಿಲ್ಲ. ಋಷ್ಯಶೃಂಗನನ್ನು ನಿವೃತ್ತಿಯಿಂದ ಪ್ರವೃತ್ತಿಯ ಕಡೆಗೆ ತಿರುಗಿಸುವಲ್ಲಿನ ಅಲ್ಲಿನ ವೇಶ್ಯೆಯರ ಚರ್ಯೆಗಳ ಸೊಗಸಿನ ವಿವರ ಇಲ್ಲಿ ಕಡಿಮೆ.

ವಾಲಿಯ ಸನ್ನಿವೇಶ ಸಹಾ ಇನ್ನೂ ಉತ್ತಮವಾಗಿರಬಹುದಾಗಿತ್ತು. ಅಲ್ಲಲ್ಲಿ ಕಲ್ಪನೆಯ ದೋಷ ತೋರಬಹುದು.

ಕುಮಾರವ್ಯಾಸನನ್ನು ಶೈಲಿಯಲ್ಲಿ ವಿಶೇಷ ಅನುಸರಿಸುವ ಈತನೂ ಭಾಮಿನೀಷಟ್ಪದಿಯನ್ನು ಲೀಲಾಜಾಲವಾಗಿ ಬಳಸಿರುತ್ತಾನೆ. ಅವನಂತೆಯೇ ಕೆಲವು ಮರಾಠಿ ಶಬ್ದಗಳನ್ನು ಉಪಯೋಗಿಸಿದರೂ ಒಟ್ಟಿನಲ್ಲಿ ಈತನ ಶೈಲಿಯು ಅವನಿಗಿಂತ ಹೆಚ್ಚು ಸುಭಗವಾಗಿದೆ. ತನ್ನ ಕಾವ್ಯವು ನವರಸತರಂಗಿಣಿಯಾಗಬೇಕೆಂದು ಬೀಭತ್ಸರಸವನ್ನು ಲಂಕಿಣಿಯ ಬಣ್ಣನೆಯಲ್ಲಿಯೂ ಮಾರಣಹೋಮದ ಬಣ್ಣನೆಯಲ್ಲಿಯೂ ಅಧಿಕವಾಗಿಯೇ ತುರುಕಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಕುಮಾರವ್ಯಾಸನ ಅನಂತರ ಹಾಸ್ಯ ರಸನಿರೂಪಣೆಯಲ್ಲಿ ಅತ್ಯಂತ ಯಶಸ್ವಿಯಾದ ಪ್ರಾಚೀನ ಕವಿ ಬತ್ತಲೇಶ್ವರನೇ. ಇಲ್ಲಿ ಕೆಲವು ಸನ್ನಿವೇಶಗಳು ಮೊಟಕಾಗಿ ಬಂದಿದ್ದರೂ ಶ್ರೀ ಬಿ. ಎಚ್. ಶ್ರೀಧರರು ಬರೆದಿರುವಂತೆ ಈತನು ಮಹಾಕವಿಯೆನ್ನುವುದು ಈ ಕಾವ್ಯವನ್ನು ಬಹಳ ಸೂಕ್ಷ್ಮವಾಗಿ ಅಭ್ಯಾಸ ಮಾಡಿದವರೆಲ್ಲರೂ ಒಪ್ಪಬಹುದಾದ ಅಭಿಪ್ರಾಯವಾಗಿದೆ.

ರಾಮಾಯಣ ಕಥೆಯು ಚಮತ್ಕಾರಪೂರಿತವಾದ ಹಲವು ಸನ್ನಿವೇಶಗಳನ್ನು ಬಹುಸೊಗಸಾಗಿ ನಿರೂಪಿಸಿರುವುದರಿಂದ ಕಥನಕಲೆಯ ಚಮತ್ಕಾರಗಳಿಂದಲೂ ಈ ಕಾವ್ಯವು ಜನಪ್ರಿಯವಾಗಿರುತ್ತದೆ.

ಇಳೆಯ ಸಮಸ್ತಜನಗಳೂ ಚನ್ನಾಗಿ ಬದುಕಬೇಕೆಂಬ ಉದ್ದೇಶದಿಂದ ದೀನರನ್ನು, ದಲಿತರನ್ನು ಕಷ್ಟಪರಿಸ್ಥಿತಿಯಲ್ಲಿರುವವರನ್ನು ಸಮಾಜದಿಂದ ಬಹಿಷ್ಕೃತರಾದವರನ್ನೂ ಉದ್ಧಾರ ಮಾಡಿದ ಶ್ರೀರಾಮಚಂದ್ರನ ಉತ್ತಮ ಚಾರಿತ್ರ್ಯವನ್ನು ನಿರೂಪಿಸಿದ ಬತ್ತಲೇಶ್ವರನು ಅವನೇ ಅಂದುಕೊಂಡಂತೆ ವರಕವಿಯಾಗಿರುತ್ತಾನೆ.

ಮುಖ್ಯ ಸಂದರ್ಭ ಗ್ರಂಥಗಳು

೧) ಕೌಶಿಕರಾಮಾಯಣ ಸಂ: ಡಾ. ಶಿವರಾಮ ಕಾರಂತ, ಹರ್ಷ ಪ್ರಕಟಣಾಲಯ, ಪುತ್ತೂರು.

೨) ರುಂಡಭೈರವನ ಕಾಳಗ ಸಂ: ಶ್ರೀ ಎನ್. ಕೆ. ಹೆಗಡೆ ಕರಾವಳಿ ಪ್ರಕಾಶನ ಹೆಗಡೆ (ಉ. ಕ.)

೩) ಪ್ರಹ್ಲಾದ ಚರಿತ್ರೆ ಸಂ: ಶ್ರೀ ಎನ್. ಕೆ. ಹೆಗಡೆ ಕರಾವಳಿ ಪ್ರಕಾಶನ, ಹೆಗಡೆ (ಉ. ಕ.)

೪) ಕೌಸಲ್ಯಾವಿವಾಹ ಸಂ: ಶ್ರೀ ಎನ್. ಕೆ. ಹೆಗಡೆ ಕರಾವಳಿ ಪ್ರಕಾಶನ, ಹೆಗಡೆ (ಉ. ಕ.)

೫) ಭೈರವ ಪುರಾಣ ಕಾಳಗ ಸಂ: ಶ್ರೀ ಎನ್. ಕೆ. ಹೆಗಡೆ ಕರಾವಳಿ ಪ್ರಕಾಶನ, ಹೆಗಡೆ (ಉ. ಕ.)

೬) ತೊರವೆ ರಾಮಾಯಣ ಸಂ: ೧ ಎನ್. ಬಸವಾರಾಧ್ಯ ಮೈಸೂರು ವಿಶ್ವವಿದ್ಯಾಲಯ, ಮೈಸೂರು

೭) ತೊರವೆ ರಾಮಾಯಣ ಸಂ: ೨ ಎನ್. ಬಸವರಾಧ್ಯ ಮೈಸೂರು ವಿಶ್ವವಿದ್ಯಾಲಯ, ಮೈಸೂರು

೮) ಲಂಕಾದಹನ, ಸಂ: ಡಾ. ಎಲ್. ಆರ್. ಹೆಗಡೆ ಸಾಹಿತ್ಯ ಭಂಡಾರ, ಹುಬ್ಬಳ್ಳಿ

೯) ಶ್ರೀಮದ್ವಾಲ್ಮೀಕಿ ರಾಮಾಯಣ ಸಂ: ಅಳಸಿಂಗಾಚಾರ್ಯರು, ಆರ್. ವೆಂಕಟೇಶ್ವರ ಪ್ರೆಸ್, ಮದ್ರಾಸ್.

೧೦) ಶ್ರೀಮದ್ರಾಮಾಯಣ ಸಂ: ೮ ,, ,,

೧೧) ಸಂಸ್ಕೃತ ಶ್ರೀಮದ್ವಾಲ್ಮೀಕಿ ರಾಮಾಯಣಮ್
ಗೀತಾ ಪ್ರೆಸ್, ಗೋರಖಪುರ

೧೨) ಸಂಸ್ಕೃತ ಶ್ರೀಮದಾನಂದ ರಾಮಾಯಣಮ್
ಠಕ್ಕರ ಗೋವರ್ಧನದಾಸ ಲಕ್ಷ್ಮೀದಾಸ ಜಗದೀಶ್ವರ
ಛಾಪಖಾನಾ, ಮುಂಬಯಿ

೧೩) ಸಂಸ್ಕೃತ ಅಧ್ಯಾತ್ಮ ರಾಮಾಯಣಮ್

೧೪) ಮಾರಿಕಾಂಬೆ ದಿ. ಶ್ರೀಧರ ಬೈಲೂರ
ಮಾರಿಕಾಂಬಾ, ದೇವಾಲಯ ಸಿರ್ಸಿ

೧೫) ಬತ್ತಲೇಶ್ವರ, ಶ್ರೀ ಬಿ. ಎಚ್. ಶ್ರೀಧರ
ಐ. ಬಿ. ಎಚ್. ಪ್ರಕಾಶನ, ಬೆಂಗಳೂರು.

೧೬) ಗೋಕರ್ಣ ಪುರಾಣ (ಶ್ರೀ ಎನ್. ಕೆ. ಹೆಗಡೆಯವರ
ಸಂಗ್ರಹದ ಹಸ್ತಪ್ರತಿ)

ಪತ್ರಿಕೆಗಳು

೧) ಪ್ರಬುದ್ಧ ಕರ್ನಾಟಕ ಸಂ, ೪೫ ಸಂ. ೨, ೧೯೬೩

೨) ,, ,, ಸಂ. ೪೮ ಸಂ. ೧, ೧೯೬೬

೩) ,, ,, ಸಂ. ೪೯ ಸಂ. ೨, ೧೯೬೭

೪) ,, ,, ಸಂ. ೫೫ ಸಂ. ೪, ೧೯೭೪

೫) ಕರ್ಮವೀರ ೩–೩–೬೭ ಶ್ರೀ ಜಿ. ಎಸ್. ಭಟ್ಟರ
ಲೇಖನ.

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

---

೧. ಶ್ರೀ ರಾಮಾಯಣ ದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು —ಎಂ. ಜಿ. ಬಿರಾದಾರ

೨. ವಿಜಯನಗರ ಕಾಲದ ಧಾರ್ಮಿಕ ಜೀವನ
—ಶ್ರೀ ಸದ್ಯೋಜಾತ ಸ್ವಾಮೀಜಿ

೩. ಧರ್ಮ, ಸಂಸ್ಕೃತಿ, ಸಮಾಜ
—ಎನ್. ಕೆ. ಕಡೆತೋಟದ

೪. ಹರಿಶ್ಚಂದ್ರ ಕಾವ್ಯದಲ್ಲಿಯ ರಸಸ್ಥಾನಗಳು
—ಸಿ. ಎಲ್. ಹೆರಕಲ್

೫. ಹಂಪೆ
—ವಸುಂಧರಾ ಫಿಲಿಯೋಜಾ

೬. ಪಂಚ ತಂತ್ರದ ಕಥೆಗಳು
—ವರದರಾಜ ಹುಯಿಲಗೋಳ

೭. ಪಂಪಕವಿ ಚಿತ್ರಿಸಿದ ಭೀಷ್ಮರು
—ಬಿ. ಸಿ. ಜವಳಿ

೮. ವೀರಶೈವಾಮೃತ ಮಹಾಪುರಾಣ
—ಕಾಶೀಪುಟ್ಟ ಸೋಮಾರಾಧ್ಯ

೯. ಎರಡನೆಯ ನಾಗವರ್ಮನ ವರ್ಧಮಾನ ಪುರಾಣ
—ಎಸ್. ಪಿ. ಪಾಟೀಲ

೧೦. ಕುಮಾರವ್ಯಾಸನ ಕೃಷ್ಣ
—ಎನ್ನೆ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ